ಮಾಡುವ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಕೆರೆಗಳು ಬಹಳ ಹೀನ ಸ್ಥಿತಿಯಲ್ಲಿ ಇವೆ. ಕೆರೆಗಳ ದುರಸ್ತಿಯಾದರೆ ನೀರಿನ ಸೌಲಭ್ಯವು ದೊರೆತು ಹೆಚ್ಚು ಧಾನ್ಯ ಉತ್ಪತ್ತಿಗೆ ಸಹಾಯವಾಗುವುದು.

ಜಿಲ್ಲಾ ಬೋರ್ಡುಗಳನ್ನು 1954ರಲ್ಲಿ ರದ್ದುಮಾಡಿ ಆಗಿನಿಂದಲೂ ಸ್ಪೆಷಲ್ ಆಫೀಸರ್ ನೇಮಕಮಾಡಿ ಕೆಲಸ ನಡೆದಿದೆ. ಈಗಿನ ಪ್ರಜಾಪ್ರಭುತ್ವದ ಕಾಲದಲ್ಲಿ ಜಿಲ್ಲಾ ಬೋರ್ಡುಗಳನ್ನು ರದ್ದು ಮಾಡಿರುವುದೂ ಮತ್ತು ಚುನಾವಣೆಗಳನ್ನು ನಡೆಸದೇ ಇದ್ದದ್ದೂ ಬಹಳ ಅನ್ಯಾಯವಾದದ್ದು. ಸಲಹಾ ಸಮಿತಿಗಳನ್ನು ನೇಮಕ ಮಾಡಿರುವುದು ನ್ಯಾಯವಾದುದಲ್ಲ. ಆದ ಕಾರಣ ಜಿಲ್ಲಾ ಬೋರ್ಡುಗಳ ಚುನಾವಣೆಗಳು ತೀವ್ರವಾಗಿ ನಡೆಯುವಂತೆ ಮಾಡಬೇಕು.

ಈ ಸಂದರ್ಭದಲ್ಲಿ ಇನ್ನೊಂದು ಮಹತ್ವದ ವಿಷಯ ಹೇಳುವುದೇನೆಂದರೆ ರಾಜಕೀಯ ಸಂತ್ರಸ್ತರಿಗೆ ಭೂಮಿಯನ್ನು ಹಂಚಲಾಗಿದೆ ಎಂದು ಮಾನ್ಯ ಮಂತ್ರಿಯವರಾದ ಶ್ರೀ ಮರಿಯಪ್ಪ ಅವರು ಹೇಳಿದರು. ಆದರೆ ಭೂಮಿಯಿಲ್ಲದ ಬಡಜನರಿಗೆ ಭೂಮಿಯು ಹಂಚಲ್ಪಡದೆ ರಾಜಕೀಯ ಸಂತ್ರಸ್ತರೆಂಬ ಹೆಸರಿನ ಮೇಲೆ ಭೂಮಿಯನ್ನು ಸಾಗುಮಾಡದೇ ಇರುವವರಿಗೆ ಭೂಮಿಯನ್ನು ಕೊಡಲಾಗಿದೆ.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಇಲಾಖೆಯ ಮಂತ್ರಿಗಳು).—ನಾನು ಹಾಗೆ ಹೇಳಲಿಲ್ಲ. ರಾಜಕೀಯ ಸಂತ್ರಸ್ತರಿಗೆ ಭೂಮಿಯನ್ನು ಹಂಚುವ ವಿಷಯ ಬಂದಿತ್ತು. ಅದು ಭೂಮಿಯಿಲ್ಲದವರಿಗೆ ಭೂಮಿಯನ್ನು ಕೊಡುವ ವಿಷಯ ಆಗಿರಲಿಲ್ಲ. ರಾಜಕೀಯ ಸಂತ್ರಸ್ತರಾದವರಿಗೆ ಭೂಮಿಯಿಲ್ಲದಿದ್ದರೆ ಭೂಮಿಯನ್ನು ಕೊಡುವುದು ಅದಾಗಿದೆ.

ಶ್ರೀ ಬಿ. ಚಾಮಯ್ಯ.—ನಾನು ಹೇಳುತ್ತಿದ್ದುದು ಬಡವರಿಗೆ ಭೂಮಿಯನ್ನು ಕೊಟ್ಟಿಲ್ಲ ಎಂದು. ಗ್ರಾಮದಿಂದ 20-30 ಮೈಲು ದೂರ ಇರುವವರಿಗೆ ಭೂಮಿಯನ್ನು ಕೊಡಲಾಗಿದೆ. ಜಮೀನು ಇರುವ ಗ್ರಾಮದ ರೈತರಿಗೆ ಜಮೀನು ಕೊಟ್ಟ ಬಗ್ಗೆ ಅನೇಕ ನಿದರ್ಶನಗಳು ಇವೆ. ಭೂಮಿ ಇಲ್ಲದವರಿಗೆ ಭೂಮಿಯನ್ನು ಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ದೇಶದಲ್ಲಿ ನೆಮ್ಮದಿ, ಶಾಂತಿ ನೆಲೆಸುವಂತೆ ಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ವಿರಾಮಕಾಲದ ಅನಂತರ ಎಂದರೆ 10-30 ಗಂಟೆಯ ಅನಂತರ ನಿರ್ಣಯವನ್ನು ಮಂಡಿಸಿರುವ ಸದಸ್ಯರು ಮತ್ತು ಮಂತ್ರಿಗಳು ಭಾಷಣ ಮಾಡುತ್ತಾರೆ. ರಾಜ್ಯಪಾಲರವರ ಭಾಷಣಕ್ಕೆ ವಂದನೆಗಳನ್ನು ಅರ್ಪಿಸುವ ನಿರ್ಣಯದ ಮೇಲೆ ನಡೆದ ಚರ್ಚೆಯಲ್ಲಿ ಇಲ್ಲಿಯ ವರೆಗೆ ಒಟ್ಟು 46 ಸದಸ್ಯರು ಮಾತನಾಡಿ ಭಾಗವಹಿಸಿದ್ದಾರೆ. ಇದರಲ್ಲಿ ಆರು ಮಹಿಳೆಯರು ಭಾಷಣ ಮಾಡಿದ್ದಾರೆ. ಮಹಿಳೆಯರಿಗೆ ಸಾಕಷ್ಟು ಅವಕಾಶ ದೊರೆತಿದೆ ಎಂದು ನಾನು ಭಾವಿಸಿದ್ದೇನೆ. ಈ ಚರ್ಚೆಯಲ್ಲಿ 22 ಜನ ಕಾಂಗ್ರೆಸ್ ಪಕ್ಷದ ಸದಸ್ಯರೂ ಮತ್ತು 24 ಜನ ವಿರೋಧಿ ಪಕ್ಷದ ಸದಸ್ಯರೂ ಭಾಗವಹಿಸಿದ್ದಾರೆ. ಈಗಾಗಲೇ ನಾಲ್ಕುದಿವಸಗಳವರೆಗೆ ಈ ಚರ್ಚೆ ನಡೆದಿದೆ ರಾಜ್ಯಪಾಲರವರ ಭಾಷಣಕ್ಕೆ ವಂದನೆಗಳನ್ನು ಅರ್ಪಿಸುವ ನಿರ್ಣಯದ ಮೇಲೆ ಮಾತನಾಡಲು ಇನ್ನೂ ಎರಡು ದಿವಸ ಹೆಚ್ಚಿಗೆ ಕೊಡುವುದಕ್ಕೆ ಸಾಧ್ಯವಿಲ್ಲ. ಪಾರ್ಲಿಮೆಂಟಿನಲ್ಲಿ 500 ಸದಸ್ಯರು ಇದ್ದರೂ ಸಹ ಇಂಥ ನಿರ್ಣಯದ ಮೇಲೆ ಚರ್ಚೆಯು ಎರಡು ದಿವಸಗಳ ವರೆಗೆ ಮಾತ್ರ ನಡೆಯುವುದು. ಈ ಸಭೆಯಲ್ಲಿ ಹೆಚ್ಚು ದಿವಸಗಳು ಯಾಕೆ ಬೇಕೆಂಬುದು ನನಗೆ ಅರ್ಥವಾಗುವುದಿಲ್ಲ. ಈ ಚರ್ಚೆ ಎರಡು ದಿವಸಗಳ ವರೆಗೆ ಮಾತ್ರ ನಡೆಯಬೇಕು ; ಎಲ್ಲ ಸದಸ್ಯರಿಗೂ ಮಾತನಾಡಬೇಕೆಂದು ಇಚ್ಛೆ ಇದೆ. ಆದರೆ ಕಾಲಾವಕಾಶದ ಪರಿಮಿತಿಯು ಇರುವುದರಿಂದ ಅದಕ್ಕೆ ಹೊಂದಿಕೊಂಡು ಹೋಗಬೇಕಾಗುತ್ತದೆ. ಇನ್ನು ಮೇಲೆ ಯಾರೂ ಮಾತನಾಡಲು ಏಳಬಾರದು. ನಿರ್ಣಯವನ್ನು ಮಂಡಿಸಿದ ಸದಸ್ಯರು ಮತ್ತು ಮಂತ್ರಿಗಳು ಮಾತನಾಡಿ ಚರ್ಚೆಗೆ ಉತ್ತರ ಕೊಡಲಿ. ಮೂರು-ನಾಲ್ಕು ಮಂತ್ರಿಗಳು ಮಾತನಾಡುವವರು ಇದ್ದಾರೆ. ಆದುದರಿಂದ ಈಗ ಅರ್ಧಗಂಟೆಯ ವಿರಾಮಕಾಲ ತೆಗೆದುಕೊಂಡು 10-30 ಗಂಟೆಗೆ ಮತ್ತೆ ಕೂಡೋಣ.

---

*The House rose at Ten of the Clock and reassembled at Thirty Minutes past Ten of the Clock.*

---

[MR. SPEAKER in the Chair.]

## MEMBERS SWORN

1. Sri B. Sham Sundar (Bhalki S. C.)
2. Sri S. P. Talwalkar (Raibag S. C.)

---

## MOTION ON GOVERNOR'S ADDRESS (*Debate contd.*)

SRI H. S. RUDRAPPA (Minister for Agriculture).—Mr. Speaker, before we proceed I want to know the procedure to be followed. I want to know whether all the Ministers can speak or only one Minister can speak on behalf of the Government.

MR. SPEAKER.—The time allowed is about one hour for the reply. If the Hon'ble Minister who wants to give reply on behalf of the Government were to adjust the time and allow other Ministers to speak, I have no objection. Otherwise, if the other Ministers want to speak, that will be taken as intervening in the debate.

SRI B. K. PUTTARAMIYA (Channapatna).—Sir, I rise on a point of order, ನಾವು ಭಾಷಣಮಾಡುವಾಗ ಮಾನ್ಯ ಮಿತ್ರರು ಇಂಟರಪ್ಟ್ ಮಾಡಿ ನಮ್ಮ ಆಲೋಚನೆಯನ್ನು ಹಾಳು ಮಾಡುತ್ತಾರೆ. ಅದಕ್ಕೆ ಮಾನ್ಯ ಅಧ್ಯಕ್ಷರು ನಮಗೆ ರಕ್ಷಣೆ ಕೊಡಬೇಕು.

ನನ್ನ ಪಾಯಿಂಟ್ ಆಫ್ ಆರ್ಡರ್ ಇದು : ರಾಜ್ಯಪಾಲರು ಭಾಷಣ ಮಾಡಿದ್ದು ಜಂಟಿ ಅಧಿವೇಶನದಲ್ಲಿ. ಆಗ ಎರಡು ಸಭೆಗಳವರೂ ಇಲ್ಲಿ ಹಾಜರಿದ್ದರು. ಈಗ ಅವರಿಗೆ ವಂದನೆಯನ್ನು ತಮ್ಮ ಮೂಲಕ ಅರ್ಪಿಸಬೇಕಾಗಿದೆ. ಅಧ್ಯಕ್ಷರು ನಮ್ಮ ವಂದನೆಯನ್ನು ರಾಜ್ಯಪಾಲರಿಗೆ ತಲುಪಿಸಿದ ಮೇಲೆ ಅವರು ಸಂಪ್ರ

(ಶ್ರೀ ಬಿ. ಕೆ. ಪುಟ್ಟರಾಮಯ್ಯ).

ದಾಯದ ಪ್ರಕಾರ ಅಕ್ನಾಲೆಜ್' ಮಾಡಿ ಕಾಗದ ಬರೆಯುತ್ತಾರೆ. ಅಧ್ಯಕ್ಷರು ಆ ವಿಚಾರದಲ್ಲಿ ಸಭೆಗೆ ಆ ಮೇಲೆ ಸೂಚನೆ ಕೊಡುವುದು ಒಂದು ವಾಡಿಕೆ. ರಾಜ್ಯಪಾಲರ ಭಾಷಣಕ್ಕೆ ನಾವು ವಂದನೆ ಸಲ್ಲಿಸಿದರೆ ಮಂತ್ರಿಗಳು ಉತ್ತರ ಕೊಡಬೇಕಾದ ಆವಶ್ಯಕತೆಯಿಲ್ಲ. ಆದ್ದರಿಂದ ರಾಜ್ಯಪಾಲರ ಭಾಷಣದ ಮೇಲೆ ವಂದನೆಯನ್ನು ನಾವು ಅರ್ಪಿಸುವಾಗ ಮಾನ್ಯ ಮಂತ್ರಿಗಳು ಮಾತನಾಡಬೇಕೆ, ಬೇಡವೆ ಎಂಬ ವಿಚಾರದಲ್ಲಿ ರೂಲಿಂಗ್' ಕೊಡಬೇಕಾಗಿ ಕೋರುತ್ತೇನೆ. ನನ್ನ ಅಭಿಪ್ರಾಯದಲ್ಲಿ ಮಂತ್ರಿಗಳು ಈ ಸಂದರ್ಭದಲ್ಲಿ ಉತ್ತರ ಕೊಡಬೇಕಾಗಿಲ್ಲವೆಂದು ತೋರುತ್ತದೆ. ಅದೂ ಅಲ್ಲದೆ ನಾವು ವಂದನೆಯನ್ನು ಅರ್ಪಿಸುವ ಪತ್ರ ಇನ್ನೂ ರಾಜ್ಯಪಾಲರಿಗೆ ತಲುಪದೆ ಇರುವಾಗ ಹೇಗೆ ಉತ್ತರ ಕೊಡಲು ಮಂತ್ರಿಗಳಿಗೆ ಅವಕಾಶವಿದೆ ? ರಾಜ್ಯಪಾಲರಿಂದ ಜವಾಬು ಬಂದ ಮೇಲೆ ಅವಕಾಶ ಬೇಕಾದರೆ ಕೊಡಬಹುದೆಂದು ತೋರುತ್ತದೆ.

(*Interruption by Sri A. V. Narasimha Reddy*).

**Sri B. K. PUTTARAMIYA.**—May I ask the Hon'ble Member not to order me to sit down or to shut my mouth. He cannot do it. ನೀವು ಹೀಗೇ ಮಾಡುತ್ತ ಬಂದರೆ ನಮಗೂ ನಿಮಗಿಂತ ಹೆಚ್ಚಾಗಿ ಮಾಡುವುದಕ್ಕೆ ಬರುತ್ತದೆ. ಆಗ ಅದರ ಫಲ ನೀವೇ ಅನುಭವಿಸುತ್ತೀರಿ. ನಿಮಗೇ ಕಷ್ಟ ಬರುತ್ತದೆ.

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಸ್ವಲ್ಪ ಮಧ್ಯೆ interrupt ಮಾಡುವುದನ್ನು ಕಡಮೆ ಮಾಡಬೇಕು. ಅವರೂ ಕೂಡ ಕುಳಿತುಕೊಳ್ಳಿ ಎಂದು ಹೇಳುವುದು ಬೇಡ ಎಂದು ನಾನು ಸೂಚಿಸಬಯಸುತ್ತೇನೆ.

**Sri A. V. NARASIMHA REDDY** (Bangalore South).—I never said 'Sit down.'

ಅಧ್ಯಕ್ಷರು.—Point of order ವಿಚಾರದಲ್ಲಿ ನಾನು ಹೇಳುವುದೇನೆಂದರೆ ; ಮಾನ್ಯ ಮಂತ್ರಿಗಳೂ ಈ ಸಭೆಯ ಸದಸ್ಯರೂ ಅದನ್ನು ಒಪ್ಪಿದ ಮೇಲೆ ಇತರ ಸದಸ್ಯರುಗಳಿಗೆ ಇರತಕ್ಕ ಹಕ್ಕು ಅವರಿಗೂ ಇದ್ದೇ ಇದೆ ಎಂದಮೇಲೆ, ಅವರು ಈ ಸೂಚನೆಯ ಪರವಾಗಿ ಬೇಕಾದರೂ ಮಾತನಾಡಬಹುದು, ವಿರೋಧಿಸಿಬೇಕಾದರೂ ಮಾತನಾಡಬಹುದು. ಆದ್ದರಿಂದ ಈಗ ಅವರು ಮಾತನಾಡುವುದನ್ನು ಪರವಾಗಿ ಮಾತನಾಡುತ್ತಿದ್ದಾರೆಂದೇ ಪರಿಗಣಿಸಬಹುದು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಇದನ್ನು ರಾಜ್ಯಪಾಲರ ಪರವಾಗಿ ಉತ್ತರ ಕೊಡುತ್ತಿದ್ದಾರೆಂದು ತಿಳಿದುಕೊಳ್ಳಬಹುದಲ್ಲವೇ ?

ಅಧ್ಯಕ್ಷರು.— ಮಾನ್ಯ ಸದಸ್ಯರು ಹೇಗೆ ಬೇಕಾದರೂ ತಿಳಿದುಕೊಳ್ಳಬಹುದು.

**Sri N. RACHAIAH** (Hunsur S. C.).—I rise on a point of order, Sir. The Ministers are not replying as legislators. The Governor who was pleased to address this House has appointed the Ministers. While discussing the Address of the Governor, it is the privilege of the House to ventilate grievances and the acts of commission and omission of the Government. Therefore, the Ministers, not as legislators but as representatives of the Governor, have every right to give reply. The Opposition Member, therefore, cannot question the right of the Ministers to reply.

**Mr. SPEAKER.**—It is not a point of order but is an explanation on my behalf. I would request Hon'ble Members not to reply on my behalf. Whatever I have got to say, I will say. Of late, I find that a tendency has developed to reply on my behalf. I would request Hon'ble Members to let me have my own way of replying. It may be correct or sometimes it may be wrong. It does not matter. Though I occupy this august Chair, as a human being I have a right to commit mistakes and learn by experience.

**Sri K. PUTTASWAMY** (Srirangapatna).—On a point of order, Sir. My Hon'ble friend, Sri Puttaramiya submitted that he was being interrupted. Of course, there should not be interruptions. But Sri Puttaramiya lost his temper and said : "ಹಾಗೇನಾದರೂ ಮಾಡಿದರೆ ಕಷ್ಟ ಅನುಭವಿಸುತ್ತೀರಿ" ಎಂದು. I think it is beside the point and I believe he was not in order while making such angry remarks against another member. He is at perfect liberty to make a submission to the Chair. Supposing a member offends Sri Puttaramiya, he has the right to request the Chair to call the offending member to order, but he cannot usurp the right of the Speaker or take the law into his hands and utter angry remarks. I, therefore, make a humble submission that that remark is out of order and the Speaker may call upon the Hon'ble Member to withdraw those remarks.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಮಾನ್ಯ ಸ್ನೇಹಿತರಾದ ಶ್ರೀ ಪುಟ್ಟಸ್ವಾಮಿಯವರು ನಾನು ಹೇಳಿದ್ದನ್ನು ಸರಿಯಾಗಿ ತಿಳಿದುಕೊಂಡಿಲ್ಲ ಎಂದು ಹೇಳಬಯಸುತ್ತೇನೆ. ನಾನು ಅಧ್ಯಕ್ಷರಲ್ಲಿ ಅರಿಕೆಮಾಡಿಕೊಂಡೆ, ಅವರು ಈ ರೀತಿ interrupt ಮಾಡಿದರೆ ನಾವೂ interrupt ಮಾಡಬೇಕಾಗಿ ಬರುತ್ತದೆ, ಆಗ ಅವರಿಗೇ ಎಷ್ಟು ಕಷ್ಟವಾಗುತ್ತದೆಂದು ತಿಳಿದುಕೊಳ್ಳಬೇಕು ಎಂದು. ನಾನು ಅವರನ್ನಲ್ಲ ಉದ್ದೇಶಿಸಿದ್ದು. ಆದ್ದರಿಂದ ನಾನು withdraw ಮಾಡಿಕೊಳ್ಳಬೇಕಾದ್ದು ಯಾವುದೂ ಇಲ್ಲ ; ಅಂಥ ಪದವನ್ನು ಉಪಯೋಗಿಸಿಲ್ಲವೆಂದು ನನ್ನ ಮನಸ್ಸಿಗೆ ಚೆನ್ನಾಗಿ ಗೊತ್ತಿದೆ.

ಅಧ್ಯಕ್ಷರು.—ನನಗೆ ಕೇಳಿದ ಪ್ರಕಾರ 'ಕಷ್ಟವಾಗುತ್ತದೆ' ಎಂದು ತಾವು ಹೇಳಿದಿರಿ. I quite understand the feelings and enthusiasm of the Hon'ble Member Sri Puttaramiya. I have however to do my duty. Let me do my duty as impartially as I can. ಆದರೆ, ನಿಮಗೇ ಕಷ್ಟವಾಗುತ್ತದೆಂದು ಹೇಳಿದ ಹಾಗೆ ನನಗೆ ಕೇಳಿಸಲಿಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅದೇ ತರಹ ನಾವೂ interrupt ಮಾಡಿದರೆ ನಿಮಗೂ ಕಷ್ಟವಾಗುತ್ತದೆ ಎಂದು ನಾನು ಹೇಳಿದ್ದುದರ ಅಭಿಪ್ರಾಯ.

ಅಧ್ಯಕ್ಷರು.—'ಕಷ್ಟವಾಗುತ್ತದೆ' ಎಂಬ ಮಾತನ್ನೇ ನಾವು unparliamentary ಯಾದುದೆಂದು ತಿಳಿದುಕೊಳ್ಳುವುದಕ್ಕಾಗುವುದಿಲ್ಲ. ಆದರೆ ಯಾವ ಕಾಲದಲ್ಲಿ ಆ ಮಾತನ್ನು ಆಡಿದ್ದಾರೆಯೆಂಬುದನ್ನು ನೋಡಬೇಕಾಗುತ್ತದೆ. "You will have difficulty" ಎಂದು ಹೇಳಿದರೆ ಅದರಲ್ಲೇನೂ ತೊಂದರೆಯಿಲ್ಲ. ನಾನು ಆ ಕಷ್ಟವನ್ನು ಸಹಿಸಿಕೊಳ್ಳಬಲ್ಲೆ; ಸಹಿಸಿಕೊಳ್ಳುತ್ತೇನೆ. ಆದರೆ 'ನೀವು ಕಷ್ಟವನ್ನು ಅನುಭವಿಸುತ್ತೀರಿ' ಎಂದು ಇತರ ಸದಸ್ಯರ ವಿಷಯದಲ್ಲಿ ಹೇಳುವುದು ಸರಿಯಲ್ಲ. ಸದಸ್ಯರು ಇಂಥ ಪ್ರಸಂಗಗಳು ಬಾರದಂತೆ ನೋಡಿಕೊಳ್ಳುವುದು ಒಳ್ಳೆಯದು. ನಾನು ಶ್ರೀ ಪುಟ್ಟರಾಮಯ್ಯ ಅವರಿಗೆ ಒಂದು ವಿನಂತಿಮಾಡಿಕೊಳ್ಳುತ್ತೇನೆ,—ಅವರು ಉತ್ಸಾಹಶಾಲಿಗಳಾದ enthusiastic parliamentarian ಎಂದು ನನಗೆ ಗೊತ್ತು. ಆದರೆ ಅವರು ತಮ್ಮ enthusiasm ಅನ್ನು ಸ್ವಲ್ಪಮಟ್ಟಿಗೆ ಹಿಡಿತದಲ್ಲಿಟ್ಟುಕೊಂಡರೆ ಬಹಳ ಒಳ್ಳೆಯದು. ಇಲ್ಲದಿದ್ದರೆ ನನಗೂ ಬಹಳ ಕಷ್ಟವಾಗುತ್ತದೆ; ಹಾಗೂ ಅವರಿಗೂ ತುಂಬ ಕಷ್ಟವಾಗುತ್ತದೆ. ಅವರು ಒಳ್ಳೆಯ parliamentarian ಆಗಬೇಕೆಂಬುದೇ ನನ್ನ ಇಚ್ಛೆ. ಪ್ರಯತ್ನಪಟ್ಟರೆ ಅವರು ಆಗಬಲ್ಲರು.

ಶ್ರೀ ಎಚ್. ಎಸ್. ರುದ್ರಪ್ಪ (ವ್ಯವಸಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ತಾವು ಕೊಟ್ಟಿರತಕ್ಕ ಕಾಲದಲ್ಲಿ ನಾನು ಹೆಚ್ಚಿನ ವಿಷಯಗಳಿಗೆ ಹೋಗದೆ ಒಂದೆರಡು ಮಾತುಗಳಲ್ಲಿ ತಿಳಿಸಿ ಮುಗಿಸಬೇಕೆಂದಿರುತ್ತೇನೆ. ಮೊದಲನೆಯ ವಿಷಯ ನಮ್ಮ ಈ ಸಭೆಯ ಮತ್ತು ಸಾರ್ವಜನಿಕರ ಗಮನವನ್ನು ಸೆಳೆದಿರತಕ್ಕ ಆಹಾರ ಪರಿಸ್ಥಿತಿ. ಆಹಾರ ಪರಿಸ್ಥಿತಿಯನ್ನು ಪರಿಶೀಲನೆಮಾಡುವಾಗ ಅದರಲ್ಲಿ ಎರಡು ಭಾಗಗಳಿವೆ. ಒಂದು ಆಹಾರದ ಉತ್ಪನ್ನ; ಎರಡನೆಯದು, ಆಹಾರದ ಧಾರಣೆ. ಈಗ ನಮ್ಮಲ್ಲಿ ಆಹಾರವಿಲ್ಲವೆಂದು ಯಾರೂ ಹೇಳುತ್ತಿಲ್ಲ. ಧಾರಣೆ ಮಾತ್ರ ಜಾಸ್ತಿಯಾಗಿದೆಯೆಂಬುದು ನಿಜ. ಇದಕ್ಕೆ ಸಕಾರಣಗಳೂ ಇವೆಯೆನ್ನಬಹುದು. ಈ ಕಾರಣಗಳನ್ನೂ ಗಮನದಲ್ಲಿಟ್ಟುಕೊಂಡು ನಾವು ಧಾರಣೆವಾಸಿಗಳು ಮಿತಿಮೀರಿ ಏರದಂತೆ ತಡೆಗಟ್ಟಬೇಕಾದದ್ದು ಅವಶ್ಯ ಕರ್ತವ್ಯವೆಂದು ನಾನು ಹೇಳುತ್ತೇನೆ.

ತಮಗೆಲ್ಲ ಗೊತ್ತಿರುವ ಹಾಗೆ ಆಹಾರದ ಧಾರಣೆಗಳು ಜಾಸ್ತಿಯಾಗಬೇಕಾದರೆ ಅನೇಕ ಕಾರಣಗಳಿರುತ್ತವೆ. ಕೆಲವು ಸದಸ್ಯರು ಹೇಳಿದರು, ಧಾರಣೆ ಜಾಸ್ತಿಯಾಗುವುದಕ್ಕೆ ದೇಶದಲ್ಲಿ ಧಾನ್ಯ ಕಡಮೆಯಾಗಿರುವುದು ಕಾರಣ ಎಂದು. ವಾಸ್ತವವಾದಕಾರಣ ಅದಲ್ಲ. ಧ್ಯಾನವನ್ನು ಬೆಳೆಯತಕ್ಕ ಬೆಲೆಯೇ ಜಾಸ್ತಿಯಾಗಿದೆ. ವ್ಯವಸಾಯಗಾರನು ಕೂಲಿಯವನಿಗೆ ಹೆಚ್ಚಿಗೆ ಕೊಡುತ್ತಿದ್ದಾನೆ. ಅವನು ಕೊಂಡುಕೊಳ್ಳಬೇಕಾದ ಸಾಮಾನುಗಳ ಬೆಲೆ ಜಾಸ್ತಿಯಾಗಿದೆ. ಮುರಮುಟ್ಟುಗಳು, ಕಬ್ಬಿಣ ಮುಂತಾದುವುಗಳ ಬೆಲೆಯೇರಿ cost of production ಏರಿದೆಯೆಂಬ ಅಂಶವನ್ನು ತಾವುಗಳು ಗಮನಿಸಬೇಕೆಂದು ಹೇಳುತ್ತೇನೆ. ತಮಗೇ ಗೊತ್ತಿದ್ದ ಹಾಗೆ 1956ನೆಯ ಇಸವಿ ಜನವರಿಯಲ್ಲಿ ಆಹಾರ ಪರಿಸ್ಥಿತಿ ರೈತರಿಗೆ ಬಹಳ ಕಳವಳವನ್ನುಂಟುಮಾಡಿತ್ತು. ಬತ್ತ, ರಾಗಿ, ಜೋಳಗಳ ಬೆಲೆ 14—15 ರೂಪಾಯಿಗಳ ವರೆಗೂ ಇಳಿದಿತ್ತು. ಆಗ ತಾವುಗಳೇ ಬಂದು ರೈತರ ಪರವಾಗಿ ಸರ್ಕಾರಕ್ಕೆ ಮನವಿಮಾಡಿಕೊಂಡಿರಿ, ಆಹಾರದ ಬೆಲೆ ಕೆಳಗಿಳಿಯುವುದನ್ನು ತಡೆಗಟ್ಟಬೇಕೆಂದು ಆಶಿಸಿದಿರಿ. ಅನೇಕ ಸಾರ್ವಜನಿಕ ಭಾಷಣಗಳೂ ಕೂಡ ಆದುವು.

ಈ ಕಾರಣಕ್ಕೋಸ್ಕರ ಇಂಡಿಯಾ ಸರ್ಕಾರದವರನ್ನು ನಾವು ಸಹಾಯಮಾಡಬೇಕೆಂದು ಕೇಳಿಕೊಂಡೆವು. ಆ ರೀತಿ ಕೇಂದ್ರ ಸರ್ಕಾರವನ್ನು ಕೇಳಿಕೊಂಡಮೇಲೆ, ರೈತನ ಧಾರಣೆವಾಸಿಗಳ ಮೇಲೆ ಕಡಮೆ ಬೆಲೆ ಬೀಳದಂತೆ ಅವರು ಪ್ರಾಂತ ಸರ್ಕಾರದವರನ್ನು ಆಹಾರ ಧಾನ್ಯಗಳನ್ನು ಕೊಳ್ಳಬೇಕೆಂದು ಒಂದು ಆಜ್ಞೆಯನ್ನು ಮಾಡಿದರು. ಅದಕ್ಕಾಗಿ ವಿಶೇಷವಾದ ಸೌಕರ್ಯಗಳನ್ನು ಒದಗಿಸಿದರು. ಒಂದು ಪಲ್ಲಾ ಬತ್ತಕ್ಕೆ 13 ರೂಪಾಯಿ ಆರು ಆಣೆಯಂತೆ ಕೊಳ್ಳಬಹುದೆಂದು ಒಂದು ಬೆಲೆಯನ್ನು ನಿಗದಿ ಮಾಡಿದರು. ಅದರಂತೆಯೇ ನಾವು ವಿಶೇಷವಾದ ಸೌಕರ್ಯಗಳನ್ನು ಡಿಪೋಗಳಿಗೂ, ಬ್ಯಾಂಕುಗಳಿಗೂ, ಖಾಸಗೀ ಮನುಷ್ಯರಿಗೂ ಒದಗಿಸಿಕೊಟ್ಟು ಅವರಲ್ಲಿ ಆಹಾರ ಸಂಗ್ರಹಣೆ ಜಾಸ್ತಿಯಾಗಿದ್ದುದರಿಂದ, ಧಾರಣೆ ಇಳಿಯುವುದನ್ನು ತಡೆದೆವು. ಇವೊತ್ತಿನ ದಿವಸ ಆಹಾರ ಧಾರಣೆ ಜಾಸ್ತಿಯಾಗುತ್ತಿದೆ ಎಂಬುದನ್ನು ನಾವು ಒಪ್ಪುತ್ತೇವೆ. ಆಹಾರ ಧಾರಣೆ ಜಾಸ್ತಿಯಾಗುವುದಕ್ಕೆ ನಾನಾ ಕಾರಣಗಳುಂಟು. ಈ ಪರಿಸ್ಥಿತಿಯನ್ನು ತಿಳಿದುಕೊಂಡೇ ಇಂಡಿಯಾ ಸರ್ಕಾರದವರು ಈಚೆಗೆ ಪರದೇಶಗಳಿಂದ ಆಹಾರ ಧಾನ್ಯಗಳನ್ನು ಆಮದು ಮಾಡಲಿಲ್ಲ. ಅನೇಕ ಮಾನ್ಯ ಸದಸ್ಯರು ರೈತರ ಆರ್ಥಿಕ ಸ್ಥಿತಿ ಉತ್ತಮ ಮಟ್ಟಕ್ಕೇರುತ್ತಿದೆ, ಅದನ್ನು ಹದಗೆಡದಂತೆ ನೋಡಿಕೊಳ್ಳಬೇಕೆಂದು ಹೇಳಿದ್ದಾರೆ. ಇದಕ್ಕಾಗಿ ರೈತರ ಆರ್ಥಿಕ ಸ್ಥಿತಿ, ರೈತರ ಮೇಲೆ ಅವಲಂಬಿಸಿರತಕ್ಕ ಕೂಲಿಗಾರರ ಸಂಖ್ಯೆ ಮತ್ತು ಅವರ ಆರ್ಥಿಕ ಸ್ಥಿತಿ ಕೊನೆಯಲ್ಲಿ ದೇಶದ ಆರ್ಥಿಕ ಸ್ಥಿತಿಯೂ ಹದಗೆಡದಂತೆ ತಡೆಯಬೇಕೆಂಬುದನ್ನು ಪದೇ ಪದೇ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಕೆಲವು ಮಾನ್ಯ ಸದಸ್ಯರು ಸರ್ಕಾರದವರು ಹೆಚ್ಚು ಧಾರಣೆಯನ್ನು ರೈತರು ಬೆಳೆದ ಆಹಾರಪದಾರ್ಥಗಳಿಗೆ ಕೊಡಬೇಕೆಂದೂ ಮತ್ತು ಇಂಡಿಯಾ ಸರ್ಕಾರದವರು ಹಿಂದೆ ಯಾವ ಯಾವ ಆಹಾರಪದಾರ್ಥಗಳನ್ನು ಆಮದುಮಾಡುತ್ತಿದ್ದರೋ ಅಷ್ಟು ಮಾಲುಗಳನ್ನು ಆಮದುಮಾಡಿಲ್ಲವೆಂದೂ ತಿಳಿಸಿದರು. ಅದು ನಿಜ. ಆದರೆ ನಮ್ಮ ದೇಶಕ್ಕೆ ಹೊರಗಿನಿಂದ ಆಹಾರಪದಾರ್ಥಗಳನ್ನು ತರಿಸಿದರೆ ಬಹಳ ಹಣ ಲುಕ್ಸಾನು ಆಗುತ್ತದೆ. ಮೊದಲನೆಯದಾಗಿ ನಮ್ಮ ದೇಶಕ್ಕೆ ಬಡತನ ಬರುತ್ತದೆ; ಎರಡನೆಯದಾಗಿ ಹೆಚ್ಚು ಬಂಡವಾಳ ಹಾಕಿ ಆಹಾರೋತ್ಪತ್ತಿಮಾಡಬೇಕು, ಮತ್ತು ಮೂರನೆಯದಾಗಿ ರೈತರಿಗೆ ಬಹಳ ಧಾರಣೆ ಕೊಡಬೇಕು—ಈ ಮೂರು ದೃಷ್ಟಿಗಳಿಂದ ಪ್ರಾಂತ ಸರ್ಕಾರದವರು ಕೇಂದ್ರ; ಸರ್ಕಾರದವರ ಸಲಹೆಯಂತೆ ರೈತರಿಗೆ ಅವರು ಬೆಳೆದ ಆಹಾರಪದಾರ್ಥಗಳಿಗೆ ಉತ್ತಮವಾದ ಧಾರಣೆ ಕೊಡಬೇಕಾಗಿದೆ. ಅದರಿಂದಲೇ ಧಾರಣೆವಾಸಿಗಳು ಜಾಸ್ತಿಯಾಗುತ್ತಿವೆ. ಹಿಂದೆ 1956ನೆಯ ಫೆಬ್ರವರಿ ತಿಂಗಳಿನಲ್ಲಿದ್ದಂಥ ಕಳವಳ ಸ್ಥಿತಿಯನ್ನು 1956ನೆಯ

(ಶ್ರೀ ಎಚ್. ಎಸ್. ರುದ್ರಪ್ಪ).

ಜರ್ಗ್ ಹೊತ್ತಿಗೆ ಸುಧಾರಿಸಿದೆವು. ಕೇಂದ್ರ ಸರಕಾರದವರು ಸುಮಾರು ಎರಡು ನೂರು ಕೋಟಿ ರೂಪಾಯಿಗಳಷ್ಟು ಆಹಾರ ಧಾನ್ಯಗಳನ್ನು ಪರದೇಶಗಳಿಂದ ಅಮದುಮಾಡುತ್ತಿದ್ದರು. ನಾವು 1951ನೇ ಇಸವಿಯಲ್ಲಿ ಸುಮಾರು 50-60 ಲಕ್ಷ ಟನ್‌ಗಳಷ್ಟು ಆಹಾರ ಪದಾರ್ಥಗಳನ್ನು ಪರದೇಶದಿಂದ ಆಮದುಮಾಡಿದ್ದೆವು. ಈಚೆಗೆ ಏಳು ಲಕ್ಷ ಟನ್‌ಗಳಷ್ಟು ಆಹಾರಧಾನ್ಯಗಳನ್ನು ಮಾತ್ರ ತರಿಸಿದುದರಿಂದ ಇವೊತ್ತಿನವರೆಗೂ ಈ ಆಹಾರ ಪರಿಸ್ಥಿತಿ ಉತ್ತಮಗೊಂಡಿದೆಯೆಂದು ನಾನು ಅರಿತುಕೊಂಡಿದ್ದೇನೆ. ಪ್ರಾಂತ ಸರ್ಕಾರಗಳ ವ್ಯವಸಾಯ ಮಂತ್ರಿಗಳ ಸಭೆ ಸೇರಿದ್ದಾಗ ಪ್ಲಾನಿಂಗ್ ಕಮಿಷನ್ನಿನ ವೈಸ್-ಚೇರ್‌ಮನ್ ಬಂದಿದ್ದರು. ಅವರೂ ಸಹ ರೈತನಿಗೆ ನಿಗದಿಯಾದ ಬೆಲೆಯನ್ನು ಆತನು ಬೆಳೆದ ಆಹಾರಪದಾರ್ಥಗಳ ಮೇಲೆ ಗೊತ್ತುಮಾಡುವುದರಿಂದ ಆತನಿಗೆ ಆಹಾರ ಬೆಳೆಯಲಿಕ್ಕೆ ಶಕ್ತಿ ಬರುತ್ತದೆ, ಇಲ್ಲದಿದ್ದರೆ ಆಹಾರ ಬೆಳೆಯುವುದನ್ನೇ ಕಡಮೆಮಾಡುತ್ತಾನೆ, ಎಂಬುದಾಗಿ ಅಭಿಪ್ರಾಯಪಟ್ಟರು. ಅದಕ್ಕೋಸ್ಕರವೇ ಪ್ರಾಂತ ಸರ್ಕಾರದವರು ಆಹಾರ ಧಾನ್ಯಗಳನ್ನು ಕೊಂಡುಕೊಳ್ಳುವುದಕ್ಕೆ ಭಾರತ ಸರ್ಕಾರದವರು ಆಜ್ಞೆಕೊಟ್ಟಿದ್ದಾರೆ. ಇವೊತ್ತಿನ ಪರಿಸ್ಥಿತಿಯಲ್ಲಿ ಶೇಕಡ 90 ಭಾಗ ಮಳೆಯಿಂದಲೇ ಬೆಳೆಯತಕ್ಕ ಜಮೀನು ಇರುತ್ತದೆ. ಆದರೆ ಈ ವರ್ಷ ಮಳೆಯೂ ಬಹಳ ಜಾಸ್ತಿಯಾಗಿದೆ ಎಂಬುದೇನೋ ನಿಜ. ಕೆಲವು ವೇಳೆ ಮಳೆ ಕಡಮೆಯಾಗಿ ತೊಂದರೆಯಾಗುತ್ತಿತ್ತು. ಈಗ ಮಳೆ ಜಾಸ್ತಿಯಾಗಿ ಲುಕ್ಸಾನು ಆಗುತ್ತಿದೆ. ಇದರಿಂದ ಜೋಳ, ರಾಗಿ, ಗೋಧಿ, ಬೆಳೆಗಳಿಗೆ ಸ್ವಲ್ಪ ತೊಂದರೆಯಾಗಿದೆ. ಮಳೆ ಜಾಸ್ತಿಯಾದುದರಿಂದ ಅನೇಕ ರೋಗಾದಿಗಳುಂಟಾದುವು. ಬತ್ತದ ಬೆಳೆ ಈ ವರ್ಷದಲ್ಲಿ ಬಹಳ ಜಾಸ್ತಿಯಾಗಿದೆ. ಜೋಳ, ರಾಗಿ, ಗೋಧಿ ಬೆಳೆಗಳು ಸ್ವಲ್ಪ ಕಡಮೆಯಾಗಿವೆ. ಈ ಕಾರಣಗಳಿಂದ ನಮ್ಮ ದೇಶದಲ್ಲಿ ಬೇಕಾದಷ್ಟು ಧಾರಣೆಗಳು ಏರುಪೇರಾಗಿವೆ. ಹೀಗಾಗಿ ಹಿಂದಿನ ವರ್ಷದ ಬೆಳೆ ಸ್ವಲ್ಪ ನಷ್ಟವಾಯಿತು. ಕೆಲವು ಪ್ರದೇಶಗಳಲ್ಲಿ ಸರ್ಕಾರದವರು ಡಿಪೋಗಳನ್ನು ತಕ್ಕ ಕಾಲದಲ್ಲಿ ಇಡದೇ ಇದ್ದುದರಿಂದ ಸ್ವಲ್ಪ ತೊಂದರೆ ಬಂತು. ಅದಕ್ಕಾಗಿಯೇ ಪ್ರಾಂತ ಸರ್ಕಾರದವರೂ ಮತ್ತು ಕೇಂದ್ರ ಸರ್ಕಾರದವರೂ ತೀವ್ರವಾಗಿ ಈ ಬಗ್ಗೆ ಗಮನಕೊಟ್ಟು ಪರಿಸ್ಥಿತಿಯನ್ನು ಹತೋಟಿಗೆ ತರುವುದಕ್ಕೆ ವಿಶೇಷ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಈ ವಿಷಯವನ್ನು ಪತ್ರಿಕೆಗಳ ಮೂಲಕ ತಾವೆಲ್ಲರೂ ನೋಡುತ್ತಿದ್ದೀರಿ. ಹಿಂದೆ ಕೇಂದ್ರ ಸರ್ಕಾರದವರು 30 ಸಾವಿರ ಟನ್‌ಗಳಷ್ಟು ಅಕ್ಕಿಯನ್ನು ಕಳಿಹಿಸಿದರು. ಆಗ ಆಗಿನ ಪರಿಸ್ಥಿತಿಯನ್ನು ಸ್ವಲ್ಪ ಮಟ್ಟಿಗೆ ಸುಧಾರಿಸಿದೆವು. ಈಗ ಮೂರು-ನಾಲ್ಕು ತಿಂಗಳುಗಳಿಂದಲೂ ಆಹಾರಧಾನ್ಯಗಳ ಧಾರಣೆ ಇನ್ನೂ ಉಲ್ಬಣವಾಗುತ್ತಿರುವುದನ್ನು ತಿಳಿದು ನಾವು ವಿಶೇಷ ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ. ಮೊನ್ನೆ ತಾನೇ ನಮ್ಮ ಕೇಂದ್ರ ಸರ್ಕಾರದ ಆಹಾರ ಮಂತ್ರಿಗಳು ಮತ್ತು ಉಪಮಂತ್ರಿಗಳು ಬಂದಿದ್ದರು. ಅವರೊಡನೆ ಈ ವಿಷಯದ ಮೇಲೆ ನಾನೂ, ಮುಖ್ಯಮಂತ್ರಿಗಳೂ, ಶ್ರೀ ಪಾಟೀಲರೂ, ಎಲ್ಲರೂ ಸೇರಿ ದೀರ್ಘವಾಗಿ ಚರ್ಚೆಮಾಡಿದೆವು. ಕೊನೆಯಲ್ಲಿ ಆಹಾರದ ವಿಚಾರದಲ್ಲಿ ಕಳವಳ ಪರಿಸ್ಥಿತಿಗೇನೂ ಕಾರಣವಿಲ್ಲ ಎಂಬುದಾಗಿ ತೀರ್ಮಾನಕ್ಕೆ ಬಂದೆವು. ಆದರೆ ನಮ್ಮ ದೇಶದಲ್ಲಿ ಅಕ್ಕಿಯ ಉಪಯೋಗ ಜಾಸ್ತಿಯಾಗುತ್ತಿದೆ. ಹಿಂದೆ ಬೆಳೆದುದಕ್ಕಿಂತ ಈಗ ಜಾಸ್ತಿಯಾಗಿಯೇ ಬೆಳೆದಿದ್ದಾರೆ. ಈಗ ಅಕ್ಕಿಯ ಬಳಕೆಯು ಜಾಸ್ತಿಯಾಗುತ್ತಿದೆ. ಅದಕ್ಕೆ ಜಾಸ್ತಿ ಡಿಮ್ಯಾಂಡ್ ಇದೆ. ಅದನ್ನು ಕಡಮೆ ಮಾಡಿಕೊಳ್ಳಬೇಕು. ಅಂದರೆ ಊಟಮಾಡಬೇಡಿ ಎಂದು ನಾನು ಹೇಳುವುದಿಲ್ಲ. ಬೇರೆ ಆಹಾರ ಪದಾರ್ಥಗಳನ್ನು ಹೆಚ್ಚಿಗೆ ಉಪಯೋಗಿಸಬೇಕು. ಆ ಪದಾರ್ಥಗಳನ್ನು ಅಕ್ಕಿಗಿಂತ ಕಡಿಮೆ ಧಾರಣೆಯಲ್ಲಿ ಕೊಡುತ್ತಿದ್ದೇವೆ ಎಂದು ಹೇಳಿದ್ದಾರೆ. ಈಗಾಗಲೇ ಅಕ್ಕಿಯನ್ನು ಪರದೇಶಗಳಿಂದ ಅಮದುಮಾಡುತ್ತಿದ್ದೇವೆ. ಆದರೆ ಪರದೇಶಗಳ ಪರಿಸ್ಥಿತಿಯೂ ಅಷ್ಟು ಚೆನ್ನಾಗಿಲ್ಲ. ಎಲ್ಲಾ ದೇಶಗಳಿಂದಲೂ ಅಕ್ಕಿಯನ್ನು ಕೊಂಡುಕೊಳ್ಳುವುದಕ್ಕೆ ಬೇಕಾದಷ್ಟು ಪ್ರಯತ್ನಗಳನ್ನು ಮಾಡುತ್ತಲಿದ್ದೇವೆ. ಇನ್ನುಮುಂದೆಯೂ ಇದೇ ರೀತಿ ಮಾಡಲೇಬೇಕಾಗಿದೆ. ಈಗಾಗಲೇ ಧಾರಣೆ ವಿಪರೀತವಾಗಿದೆ. ಈ ದೃಷ್ಟಿಯಿಂದ ನಮ್ಮ ದೇಶದಲ್ಲಿ ಹೆಚ್ಚಿಗೆ ಧಾರಣೆ ಕೊಟ್ಟು ಪರದೇಶದಿಂದ ಆಮದು ಮಾಡುವುದಕ್ಕಿಂತ, ಜನರು ವಿಶೇಷವಾಗಿ ಗೋಧಿಯನ್ನು ಉಪಯೋಗಿಸಿದರೆ, ಆಗ ಅಕ್ಕಿಯ ಉಪಯೋಗ ಕಡಮೆಯಾಗಿ ನಮ್ಮ ಪರಿಸ್ಥಿತಿ ಸರಿಹೋಗುತ್ತದೆ, ಮುಖ್ಯವಾಗಿ ದೇಶದಲ್ಲಿ ಆಗ ಆಹಾರ ಧಾರಣೆಗಳು ಹೆಚ್ಚಾಗದಂತೆ ತಡೆಗಟ್ಟಲೂ ಬಹುದು.

ಶ್ರೀ ಡಿ. ದೇವರಾಜ್ ಅರಸ್ (ಹುಣಸೂರು).—ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಎಷ್ಟು ಹೆಚ್ಚು ಆಹಾರಧಾನ್ಯಗಳನ್ನು ಬೆಳೆಯಬಹುದೆಂಬುದನ್ನು ಅಂಕಿಅಂಶಗಳ ಮೂಲಕ ತಿಳಿಸುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ನಮ್ಮ ದೇಶದ ಜನಗಳಿಗೆ ಈ ವಿಚಾರವಾಗಿ ಅಂಕಿಅಂಶಗಳನ್ನು ಕೊಡಬೇಕೆಂಬುದು ನನಗೆ ಬಹಳ ಇಷ್ಟವಿದೆ. ಆದರೆ ಈ ಸಂದರ್ಭದಲ್ಲಿ ಅದನ್ನು ಹೇಳಬೇಕಾದರೆ ಬಹಳ ಕಾಲ ತೆಗೆದುಕೊಳ್ಳುತ್ತದೆ. ದೇಶದ ಆದಾಯ ವ್ಯಯತಃಖ್ತೆಯನ್ನು ಮಂಡಿಸುವಾಗ ಈ ಬಗ್ಗೆ ಎಷ್ಟೆಷ್ಟು ಕಾರ್ಯಗತವಾಗಿದೆ, ಎಷ್ಟೆಷ್ಟು ಕಾರ್ಯ ಆಗಬೇಕು, ಎಷ್ಟು ಪ್ರಯೋಜನವಾಗಿದೆ ಯೆಂಬುದನ್ನು ತಮ್ಮ ಗಮನಕ್ಕೆ ತರಲಾಗುವುದು.

ಶ್ರೀ ಡಿ. ದೇವರಾಜ್ ಅರಸ್.—ಇನ್ಯಾವ ಸಂದರ್ಭದಲ್ಲಿ ನಾನು ಕೇಳಿದ ಅಂಶವನ್ನು ಒದಗಿಸುತ್ತೀರಿ?

ಅಧ್ಯಕ್ಷರು.—ಬಜೆಟ್ ಚರ್ಚೆಯ ಕಾಲದಲ್ಲಿ ಕೊಡುತ್ತೇವೆಂದು ಆಗಲೇ ಮಂತ್ರಿಗಳು ಉತ್ತರ ಹೇಳಿದ್ದಾರೆ.

ಶ್ರೀ ಎಚ್. ಎಸ್. ರುದ್ರಪ್ಪ.—ಹಿಂದೆ 50 ಸಾವಿರ ಟನ್‌ಗಳಷ್ಟು ಅಕ್ಕಿಯನ್ನು ಹೊರಗಿನಿಂದ ನಮ್ಮ ಸರ್ಕಾರದಲ್ಲಿ ಯಾವಾಗಲೂ ಡೆಫಿಸಿಟ್ ಏರಿಯಾಗಳಿಗೋಸ್ಕರ ತರಿಸುತ್ತಿದ್ದೆವು. ಈಗ ಸರ್ಕಾರ ಏನೇನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೋ ಅವುಗಳೆಲ್ಲವನ್ನೂ ಖಂಡಿತವಾಗಿ ಈ ಸಭೆಯಲ್ಲಿ ತಿಳಿಸುವುದಕ್ಕೆ ಪ್ರಯತ್ನಪಡುತ್ತೇನೆ.

11 A. M.

ಸ್ವಾಮಿ, ಹೆಚ್ಚಿಗೆ ಕಾಲ ತೆಗೆದುಕೊಳ್ಳದೆ ಆಹಾರ ಧಾನ್ಯಗಳ ಪೂರೈಕೆಯ ಬಗ್ಗೆ ಸರ್ಕಾರದವರು ಏನು ವ್ಯವಸ್ಥೆಮಾಡಿದ್ದಾರೆ ಎಂಬುದನ್ನು ಹೇಳಲಿಚ್ಛಿಸುತ್ತೇನೆ. ಮೊನ್ನೆ ತಾನೆ ಕೇಂದ್ರ ಸರ್ಕಾರದ ಆಹಾರ ಮಂತ್ರಿಗಳಾದ ಶ್ರೀ ಅಜಿತಪ್ರಸಾದ ಜೈನ ಅವರು ಬೆಂಗಳೂರಿಗೆ ಬಂದಾಗ ಅವರ ಕೂಡ ಮೈಸೂರು ರಾಜ್ಯದಲ್ಲಿಯ ಆಹಾರಧಾನ್ಯದ ಪರಿಸ್ಥಿತಿಯ ಬಗ್ಗೆ ಚರ್ಚೆಮಾಡಿದ್ದೇವೆ. ನಮ್ಮ ಪ್ರಾಂತ್ಯಕ್ಕೆ ತಿಂಗಳಿಗೆ 12,000 ಟನ್ ಧಾನ್ಯ ಒದಗಿಸಬೇಕೆಂದು ಅವರನ್ನು ಕೇಳಿಕೊಂಡಿದ್ದೇವೆ. ಅಕ್ಕಿಯನ್ನು ಹೊರಗಿನಿಂದ ತರಿಸ

ಬೇಕಾಗುತ್ತದೆ. ಕೇಂದ್ರ ಸರ್ಕಾರದ ಆಹಾರ ಮಂತ್ರಿಗಳವರು ಅಕ್ಕಿಯ ಪ್ರಮಾಣವನ್ನು ಕಡಮೆ ಮಾಡಿ, ಹೆಚ್ಚು ಗೋಧಿಯನ್ನು ಉಪಯೋಗಿಸಬೇಕೆಂದು ಸಲಹೆ ಇತ್ತಿದ್ದಾರೆ. ಈ ರೀತಿಯಾಗಿ ಮಾಡಿದರೆ ಹೆಚ್ಚು ಗೋಧಿಯನ್ನು ಪೂರೈಸುತ್ತೇವೆಂದು ಅವರು ಭರವಸೆ ಕೊಟ್ಟಿದ್ದಾರೆ. ಅಕ್ಕಿಯನ್ನು ಹೆಚ್ಚಾಗಿ ಉಪಯೋಗಿಸುವವರು ಅಕ್ಕಿಯ ಪ್ರಮಾಣವನ್ನು ಕಡಮೆ ಮಾಡಿ ಅದರ ಬದಲ ಗೋಧಿಯನ್ನು ಉಪಯೋಗಿಸಿ ಸರಕಾರದೊಡನೆ ಸಹಕರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕಡಮೆ ಬೆಲೆಗೆ ಹೆಚ್ಚು ಗೋಧಿಯನ್ನು ಒದಗಿಸಲಾಗುವದು. ಈಗಾಗಲೇ ನಮ್ಮ ರಾಜ್ಯದಲ್ಲಿ 664 ಫೇರ್ ಪ್ರೈಸ್ ಡಿಪೋಗಳನ್ನು ತೆರೆಯಲಾಗಿದೆ. ಇನ್ನು ಹೆಚ್ಚಿಗೆ ಡಿಪೋಗಳನ್ನು ತೆರೆಯುವದು ಆವಶ್ಯಕವಾಗಿದೆಂದು ಕಂಡುಬಂದರೆ ಧಾರಣೆಯನ್ನು ಹತೋಟಿಗೆ ತರಲು ಆ ರೀತಿಯಾಗಿ ಹೆಚ್ಚು ಡಿಪೋಗಳನ್ನು ತೆರೆಯಲಾಗುವದು.

ರೈತರು ಬೆಳೆಯುವ ಆಹಾರಧಾನ್ಯಗಳಿಗೆ ಸರಿಯಾದ ಬೆಲೆ ಬಾರದೇ ಇದ್ದ ಮೂಲಕ ರೈತರಿಗೆ ತೊಂದರೆಯಾಗುತ್ತಿದೆ. ಆಹಾರಧಾನ್ಯಗಳ ಬೆಲೆಯನ್ನು ನಿಗಧಿ ಮಾಡುವುದು ಮತ್ತು ಹತೋಟಿಯಲ್ಲಿ ಇಟ್ಟುಕೊಳ್ಳುವುದು ರಾಜ್ಯ ಸರ್ಕಾರಕ್ಕೆ ಅಷ್ಟೇ ಸಂಬಂಧಪಟ್ಟ ಪ್ರಶ್ನೆಯಲ್ಲ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಸೇರಿ ಈ ವಿಷಯದಲ್ಲಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮುಂಜಾಗ್ರತೆಯಿಂದ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಪರದೇಶದಿಂದ ಧಾನ್ಯ ತರಿಸಬಹುದು. ಧಾರಣೆ ಕಡಮೆಮಾಡುವುದು ಬಹಳ ಸುಲಭ. ಆಹಾರಧಾನ್ಯಗಳ ಧಾರಣೆ ಹೆಚ್ಚಾದರೆ ರೈತನಿಗೆ ಬೆಲೆ ಜಾಸ್ತಿ ಬರುತ್ತದೆ ಎಂಬ ವಿಷಯವನ್ನು ಪತ್ರಿಕೆಗಳಲ್ಲಿ ಪ್ರತಿಪಾದನೆಮಾಡಿರುವದನ್ನು ನಾನು ನೋಡಿದ್ದೇನೆ. ರೈತನಿಗೆ ಯೋಗ್ಯವಾದ ಧಾರಣೆ ದೊರೆಯುವಂತೆ ಶೀಘ್ರವಾಗಿ ಎಲ್ಲಾ ಏರ್ಪಾಡು ಮಾಡುತ್ತೇವೆ. ವಿರೋಧಿ ಪಕ್ಷದ ಸದಸ್ಯರು ಈ ವಿಷಯದ ಬಗ್ಗೆ ಟೀಕೆಮಾಡಿದ್ದಾರೆ ಅದಕ್ಕಾಗಿ ಬಹಳ ಸಂತೋಷವಾಗುತ್ತದೆ. ಟೀಕೆಮಾಡುವುದು ಬಹಳ ಉತ್ತಮವಾದುದು, ಅದರಿಂದ ನಮಗೆ ಏನೂ ನೋವು ಆಗಿಲ್ಲ. ಟೀಕೆಮಾಡಿ ನಮ್ಮನ್ನು ಎಚ್ಚರಿಸಲಿಕ್ಕೆಬೇಕು. ಆದರೆ ವ್ಯರ್ಥವಾಗಿ ಟೀಕೆಮಾಡುವುದು ಉಚಿತವಲ್ಲ. ಆಯವ್ಯಯದ ಚರ್ಚೆಯ ಕಾಲದಲ್ಲಿ ಸರ್ಕಾರದ ಪರವಾಗಿ ಇನ್ನೂ ಏನೇನು ಜವಾಬು ಕೊಡಬೇಕಾಗಿದೆಯೋ ಅದನ್ನೆಲ್ಲ ಆ ಕಾಲದಲ್ಲಿ ಹೇಳುತ್ತೇನೆ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

* ಶ್ರೀ ಆರ್. ಚೆನ್ನಿಗರಾಮಯ್ಯ (ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ನನಗೆ ಸಂಬಂಧಪಟ್ಟ ವಿಚಾರದಲ್ಲಿ ಒಬ್ಬ ಮಾನ್ಯ ಸದಸ್ಯರು ಎತ್ತಿದ ಎರಡು ಅಂಶಗಳಿಗೆ ಜವಾಬು ಕೊಡುತ್ತೇನೆ. ಜಿಲ್ಲಾ ಬೋರ್ಡುಗಳಿಗೆ ಲ್ಯಾಂಡ್ ಅಸೆಸ್‌ಮೆಂಟಿನ ಹಣವನ್ನು ಕೊಟ್ಟಿಲ್ಲ ಮತ್ತು ಆಡಳಿತಕ್ಕೆ ತೊಂದರೆಯಾಗಿದೆ ಎಂದು ಮಾನ್ಯ ಸದಸ್ಯರಾದ ಶ್ರೀಮಾನ್ ಕೆಂಚಪ್ಪ ಅವರು ಹೇಳಿದರು. ಆದರೆ ಸರಕಾರದಿಂದ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ದೊರೆಯಬೇಕಾದ ಲ್ಯಾಂಡ್ ರೆವೆನ್ಯೂ ಅಸೆಸ್‌ಮೆಂಟಿನ ಹಣದ ಭಾಗವನ್ನು ಈಗಾಗಲೇ ಎಲ್ಲಾ ಡಿಸ್ಟ್ರಿಕ್ಟು ಬೋರ್ಡುಗಳಿಗೂ ಕೊಡಲಾಗಿದೆ. ಇನ್ನೂ ಬಹುಮಟ್ಟಿಗೆ ಜಾಸ್ತಿ ಹಣ ಅಡ್‌ವಾನ್ಸ್ ಕೊಟ್ಟಿದೆ. ಅಸೆಸ್‌ಮೆಂಟಿನ ಮೇಲೆ ಇಂತಿಷ್ಟು ಕೊಡಬೇಕೆಂದು ಪ್ರಮಾಣವಿದೆ. ತಾಲ್ಲೂಕು ಕಚೇರಿಯ ಲೆಕ್ಕಪತ್ರದಂತೆ ಇಷ್ಟು ಅಸೆಸ್‌ಮೆಂಟ್ ಬಂದಿದೆಂದು ಗೊತ್ತಾದರೆ ಅದಕ್ಕೆ ಅನುಗುಣವಾಗಿ ಇಂತಿಷ್ಟು ಪ್ರಮಾಣ ಹಣ ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡಬೇಕೆಂದು ಇದೆ. ಅಕೌಂಟೆಂಟ್ ಜನರಲ್ಲರವರು ಲೆಕ್ಕಪತ್ರ ತಪಾಸು ಮಾಡಿ ನಮಗೆ ತಿಳಿಸುತ್ತಾರೆ. ಬಹುಮಟ್ಟಿಗೆ ಎಲ್ಲ ಡಿಸ್ಟ್ರಿಕ್ಟು ಬೋರ್ಡುಗಳಿಗೆ ಕೊಟ್ಟಿದೆ. ಕೆಲವೊಂದು ಕಡೆಗೆ ಜಾಸ್ತಿ ಕೂಡ ಕೊಟ್ಟಿದೆ. ಅದನ್ನು ಇನ್ನು ಮುಂದೆ adjust ಮಾಡಬೇಕಾಗಿದೆ.

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಜಿಲ್ಲಾ ಬೋರ್ಡುಗಳಿಗೆ ಅಸೆಸ್‌ಮೆಂಟಿನಲ್ಲಿಯ ಕೊಡುವ ಹಣವನ್ನು ಯಾವ ಬೇಸಿಸ್ ಮೇಲೆ ಅಡ್‌ವಾನ್ಸ್ ಪೇಮೆಂಟ್ ಮಾಡಲಾಗಿದೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಚಿತ್ರದುರ್ಗ ಡಿಸ್ಟ್ರಿಕ್ಟ್ ಪಂಚಾಯಿತಿಗಳ ಅಕೌಂಟ್ಸು ಕಳಿಸಿ ಕೊಟ್ಟಿಲ್ಲ. ಹಾಸನ್ ಡಿಸ್ಟ್ರಿಕ್ಟಿನಿಂದ ಕಳಿಸಲಾಗಿದೆ. ಅಡ್ವಾನ್ಸ್ ಸಹ ಕೊಟ್ಟಿದ್ದಾರೆ. ಡೆಪ್ಯುಟಿ ಕಮಿಷನರ್ ಅವರು ಚಿತ್ರದುರ್ಗ ಡಿಸ್ಟ್ರಿಕ್ಟಿನ ಅಕೌಂಟ್ಸ್ ವಿಚಾರ ತಿಳಿಸಿದ್ದಾರೆ. ಅಲಾಟ್‌ಮೆಂಟ್ ಮಾಡುವುದರಲ್ಲಿ ತೊಂದರೆಯಾಗಿಲ್ಲ. ಕೆಲವು ಕಡೆ ನಿಧಾನವಾಗಿದೆ. ಪದೇ ಪದೇ ರಿಮೈಂಡ್ ಮಾಡಿದ್ದಾರೆ.

[SRIMATHI LAKSHMIDEVI RAMANNA in the Chair.]

ಶ್ರೀ ಪುಟ್ಟಣ್ಣ ಅವರು ಪಂಚಾಯಿತಿ ರೂಲ್ಸನ್ನು ಮಾಡಿಲ್ಲವೆಂದು ಹೇಳಿದರು. ಎಲ್ಲಾ ಸೆರ್ಕಲ್‌ಗಳಿಗೂ ರೂಲ್ಸ್ ಮಾಡಿಲ್ಲದಿದ್ದರೂ ಕೆಲವಕ್ಕೆ ಮಾಡಿದೆಯೆಂದು ಸೂಚಿಸುತ್ತೇನೆ. ವಿಚಾರಮಾಡಿದ್ದರಲ್ಲಿ 1953, 1954 ಮತ್ತು 1955ನೆಯ ಇಸವಿಗಳಲ್ಲಿ ನೋಟಿಫಿಕೇಷನ್ ಹೊರಡಿಸಿ ಮೂರು ಸೆರ್ಕಲ್‌ಗಳಿಗೆ ರೂಲ್ಸ್‌ಮಾಡಿದರು, ಎಲೆಕ್ಷನ್ ರೂಲ್ಸ್ ಆಗಿದೆ ಎಂದು ಗೊತ್ತಾಯಿತು. ಅದಾಗುವವರೆಗೆ ಚುನಾವಣೆ ಪಂಚಾಯಿತಿಗೆ ಸಂಬಂಧಪಟ್ಟಂತೆ ನಡೆಸುವುದಕ್ಕೆ ಆಗುತ್ತಿರಲಿಲ್ಲ. ಪಂಚಾಯತಿ ರಚನೆ ಮಾಡುವಾಗ ನೋಟಿಫಿಕೇಷನ್ ಇಷ್ಯೂ ಮಾಡಿದ್ದಾರೆ. ಸಬ್ ಡಿವಿಜನ್ ಆಫೀಸರುಗಳಿಗೆ ಮತ್ತು ಅಮಲ್ದಾರರುಗಳಿಗೆ ಏನು ಅಧಿಕಾರವಿದೆಯೆ ಬುದಕ್ಕೆ ರೂಲ್ಸ್ ಮಾಡಿದ್ದಾರೆ. ಇನ್ನೂ ಕೆಲವು ಮಾಡಬೇಕಾದದ್ದಿದೆ. ಆ ಕೆಲಸ ಚುನಾವಣಾ ಗಲಾಟೆಯಿಂದ ಸ್ವಲ್ಪ ನಿಧಾನವಾಗಿದೆ. ತಕ್ಷಣ ಇಷ್ಯೂ ಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಜಿ. ಎನ್. ಪುಟ್ಟಣ್ಣ ತುಮಕೂರು).—ಈಗಲೂ ಸಹ ರೂಲ್ಸ್ ಮಾಡಿಲ್ಲ. ಇದರಿಂದ ಬಹಳ ಅನನುಕೂಲವಾಗಿದೆ. ಎಲೆಕ್ಷನ್ ನೋಟಿಫಿಕೇಷನ್ ಮಾತ್ರ ಹೊರಡಿಸಿದ್ದಾರೆಯೇ ವಿನಾ ಎಲೆಕ್ಷನ್ ರೂಲ್ಸ್ ಮಾಡಿರುವುದಿಲ್ಲ, ಮಾಡಬೇಕು, ಮಾಡುತ್ತೇವೆ ಎಂದು ಹೇಳಿದರೆ ಒಪ್ಪಿಕೊಳ್ಳುತ್ತೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ನಾನಾಕಾರಣಗಳಿಂದ ಅದು ವಿಳಂಬವಾಗಿರಬಹುದು. ವಿಚಾರ ಮಾಡಿ ಸೂಕ್ತ ಕ್ರಮ ಕೈಕೊಳ್ಳುತ್ತೇವೆ. ಪಂಚಾಯಿತಿ ಆಡಳಿತ ಸರಿಯಾಗಿಲ್ಲವೆಂಬುದು ಅವರಿಗೇ ಗೊತ್ತಿದೆ. ಅವರೂ ಸಬ್-ಡಿವಿಜನ್ ಆಫೀಸರಾಗಿದ್ದರು. ಏಕೆ ನಿಧಾನವಾಗಿದೆಯೆಂಬ ಅನುಭವ ಅವರಿಗೂ ಇದೆ. ಅವರೂ ಅದಕ್ಕೆ ಕೆಲವು ಸಂದರ್ಭಗಳಲ್ಲಿ ಭಾಗಿಯಾಗಿರಬಹುದು. ಸಾಧ್ಯವಾದಮಟ್ಟಿಗೆ ಇರುವ ಲೋಪವನ್ನು ಸರಿಪಡಿಸುತ್ತೇವೆ.

Sri B. VAIKUNTA BALIGA (Minister for Labour and Legal Affairs).—Hon'ble Chairman, I intervene in the debate only for the purpose of clarifying certain basic errors that have crept into the minds of some of the Hon'ble Members that levelled criticisms against the Government. I will deal in particular so far as the labour department is concerned.

It was mentioned that so far as the Second Five-Year Plan is concerned, it should not be cut down and at the same time the criticism went on to say that taxation measure ought to have been reduced. How this could be done without taxation is a point which has not been dealt with. Further, it was said that the income of certain class of people was going up and the income of certain other people remained stationary and expenses have gone up. I submit, it is not the correct approach. Taxation on the rich people has gone on at such a space that practically no rich man, after a period of one or two decades, will exist. Anyway, to say that taxation is entirely put on the poor is putting the emphasis on the wrong side.

Coming to the question of labour policy, it was said that the plantation agreement was under forced circumstances. I submit that it is entirely an unfair criticism for the reason that it is a voluntary agreement arrived at between all the planters duly represented and all the labour aggregating to about a lakh and twenty thousand. The House can well appreciate the magnitude and the implication of the large amount involved. All the parties, with pleasure and happiness, have arrived at an agreement. To say to the contrary, especially by an Hon'ble Member who also participated in that to some extent was not easily understandable by me. Again, it was suggested that there was inordinate delay in the implementation of the labour law particularly, by Governmental concerns. The particular instance that was mentioned to sustain the argument was about the delay in framing the rules under the Industrial Disputes Act. Perhaps, the speaker is not aware that these rules have been finalised and have been ordered to be published. To attribute motives for this short delay that the Government has unreasonably and purposely delayed the implementation of the labour legislation, is unfair. Then again, Sir, there was the question of the inordinate delay in the disposal of labour disputes. But the House must appreciate how there are certain things which are beyond the control of human being—the illness of the Member of the Tribunal and not knowing when he would recover and so on. This should not be done to criticise the Government. Again Sir, there has been a change in the law. The old Tribunal—the Bench —has been replaced by a single man Tribunal. Orders have been passed to constitute Tribunal and it will come into force almost immediately.

One more criticism which pained me a little was with regard to the representation made to this august House in regard to the concerns of the Central Government, making particular mention of the H.A.L. Only if I place the facts before the House, the House will understand how unjustified the criticisms were. It looked as if, by the criticisms levelled, that no efforts had been made for conciliation. I have the proceedings of the meeting of the Management and the Labour. There have been a series of meetings where various points have been settled by amicable negotiations between themselves. The House will appreciate this because nobody has forced either the Management or the workers. I will read only one sentence out of the latest report that has come to me.

> "In view of the amicable decision, the Associations said that they will write to the Mysore Government to withhold action on their reference on the 18 demands until further intimation."

This is the meeting held on the 11th. The House will, therefore, appreciate whether there is inordinate delay or whether the Government is justified in saying that all efforts have been made to speed up the disposals of the Industrial disputes. When peace is restored, efficiency comes in, produc-

tion goes up. Government is certainly interested in the welfare of the labour and also in the keeping up to the highest target possible of production in the State.

Then, there was also a criticism that the delay was leading to inefficiency. Where exactly inefficiency is, I cannot understand. Is there inefficiency in theranks of labour or in the ranks of management or in the Government department? We must remember that it is not a bargain between individuals. It is certainly a difficult problem. In individual cases, we may sit across the table and come to an agreement. There is difference with regard to settling of disputes between persons and industrial disputes. These disputes cannot be settled so easily and quickly. Therefore, I request the House to kindly examine the criticisms made in that light. Sir, reference was also made to the inordinate delay with regard to a particular case and that was about Sri Sitarama Sastry. Evidently, the Hon'ble Member was unaware that the case was disposed of. If he is under the impression that the case has not been disposed of, Government is not responsible. I would only say that the criticism is not correct. At the same time, I must inform the House that another effort has been made that the decision should be reviewed. That matter is recently received and it is under examination. I may, however, assure the House that so far as the Labour Department is concerned, delay would be avoided, speedy action would be taken and everything would be done to protect the interests of the labour and management. With that assurance, I think, the criticisms levelled against the Labour Department would be revised by Hon'ble Members.

ಒಬ್ಬ ಸದಸ್ಯರು.—ಮಾನ್ಯ ಮಂತ್ರಿಗಳು ಇಂಗ್ಲೀಷಿನಲ್ಲಿ ಹೇಳಿದ್ದು ನಮಗೇನೂ ಅರ್ಥವಾಗಲಿಲ್ಲ. ನಮ್ಮದು ಕನ್ನಡದೇಶ. ಕನ್ನಡದಲ್ಲಿ ಎಲ್ಲ ನಡವಳಿಕೆಯೂ ನಡೆಯುತ್ತದೆಂದು ತಿಳಿದು ಕನ್ನಡ ಬಲ್ಲ ಪ್ರತಿನಿಧಿಗಳನ್ನೇ ಆರಿಸಿ ಕಳುಹಿಸಿದ್ದಾರೆ. ಈ ಸಭೆಯಲ್ಲಿ ಇಂಗ್ಲೀಷ್ ತಿಳಿಯದ ಸದಸ್ಯರು ಎಷ್ಟೋ ಜನರಿದ್ದಾರೆ. ಆದ್ದರಿಂದ ಅವರು ಮಾತನಾಡಿದ್ದನ್ನು ದಯವಿಟ್ಟು ಸಂಕ್ಷೇಪವಾಗಿ ಕನ್ನಡದಲ್ಲಿ ತಿಳಿಸಬೇಕೆಂದು ನಾನು ಕೋರುತ್ತೇನೆ.

ಚೇರ್ಮನ್ ಅವರು (ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ).—ಮಾನ್ಯ ಮಂತ್ರಿಗಳು ಕನ್ನಡದಲ್ಲಿ ತಮ್ಮ ಭಾಷಣದ ಸಾರಾಂಶವನ್ನು ಸದಸ್ಯರುಗಳ ಅವಗಾಹನೆಯ ಬಗ್ಗೆ ಹೇಳಲಿ.

ಶ್ರೀ ವೈಕುಂಠ ಬಾಳಿಗ.—ನಾನು ಇಂಗ್ಲೀಷಿನಲ್ಲಿ ಭಾಷಣ ಮಾಡಿದ್ದನ್ನು ಅಧ್ಯಕ್ಷರ ಅಪ್ಪಣೆಯ ಪ್ರಕಾರ ಸಂಕ್ಷೇಪವಾಗಿ ಕನ್ನಡದಲ್ಲಿ ತಿಳಿಸುತ್ತೇನೆ.

ಸರ್ಕಾರದವರು ಕಾರ್ಮಿಕರ ಹಿತಕ್ಕೆ ಹೆಚ್ಚಿಗೆ ಗಮನಕೊಡುವುದಿಲ್ಲ. ಲೇಬರ್ ಕಾನೂನುಗಳನ್ನು ಜಾರಿಗೆ ಕೊಡುವುದರಲ್ಲಿ ವಿಪರೀತ ಕಾಲವಿಳಂಬವಾಗುತ್ತಿದೆ, ಅದರಲ್ಲೂ ಸರ್ಕಾರಿ ಉದ್ಯಮಗಳಲ್ಲೇ ಈ ವಿಳಂಬ, ಹೆಚ್ಚಾಗಿ ಕಾಣಬರುತ್ತದೆಂದು ಮಾನ್ಯ ಸದಸ್ಯರು ಹೇಳಿದರು. ತಮ್ಮ ಆಪಾದನೆಯಲ್ಲಿ ಸತ್ಯಾಂಶವಿದೆಯೆಂದು ತೋರಿಸಲು ಮಾನ್ಯ ಮಿತ್ರರು ಎರಡು ಉದಾಹರಣೆಗಳನ್ನು ಕೊಟ್ಟರು. ಪ್ರಥಮತಃ ಹೇಳಿದರು, ಇಂಡಿಸ್ಟ್ರಿಯಲ್ ಡಿಸ್ಪ್ಯೂಟ್ಸ್ ಆಕ್ಟ್ ಪ್ರಕಾರ ರೂಲ್ಸನ್ನು ಬೇಗ ಮಾಡಬೇಕಾಗಿದ್ದರೂ ಅದನ್ನು ಇಲ್ಲಿಯವರೆಗೂ ಮಾಡದಿರುವುದು ಸರ್ಕಾರದ ತುಂಬ ವಿಳಂಬಮಯವಾದ ನೀತಿಗೆ ಉದಾಹರಣೆಯೆಂದು ಹೇಳಿದರು. ಅದು ತಪ್ಪು ತಿಳಿವಳಿಕೆಯಿಂದ ಹೇಳಿದ ಮಾತು. ರೂಲ್ಸ್‌ಗಳೆಲ್ಲವೂ ಪರಿಪೂರ್ಣ ಮಾಡಲ್ಪಟ್ಟು ಪ್ರಕಟಣೆ ಮಾಡಲು ಆರ್ಡರ್ ಆಗಿದೆ. ಮುದ್ರಣಾಲಯದಲ್ಲಿ ಛಾಪಾ ಆಗಲು ಹೋಗಿದೆ.

ಅಂತರ ಸದಸ್ಯರು ಪ್ಲಾಂಟೇಷನ್ ಕಾರ್ಮಿಕರ ವಿಷಯದಲ್ಲಿ ಒಂದು ಸರಿಯಾದ ಒಪ್ಪಂದವಾಗದಿರುವುದು ಶೋಚನೀಯವೆಂದು ಹೇಳಿದರು. ಇದೂ ಸರಿಯಲ್ಲ. ಒಂದು ಲಕ್ಷ 20 ಸಾವಿರ ಕೆಲಸಮಾಡುವ ಜನರಿರುವಂಥ ಕೂಲಿಗಾರರ ಸಂಘವೂ ಮತ್ತು ಪ್ಲಾಂಟರುಗಳ ಚುನಾಯಿತ ಪ್ರತಿನಿಧಿಗಳೂ ತಾವೇ ತಾವಾಗಿ ಸೇರಿ ಒಂದು ಒಪ್ಪಂದಮಾಡಿಕೊಂಡಿದ್ದು ಶ್ಲಾಘನೀಯವಾದದ್ದು, ಗೌರವಯುತವಾದದ್ದು ಮತ್ತು ಸರಿಯಾದದ್ದು. ಹೀಗಿರುವಾಗ, ಈ ವಿಚಾರಗಳಲ್ಲಿ ಸ್ವಲ್ಪ ಮಟ್ಟಿನ ಕೈವಾಡವಿದ್ದು ಮಾನ್ಯ ಸದಸ್ಯರೇ ತದ್ವಿರುದ್ಧವಾಗಿ ತಿಳಿಸಿದ್ದರ ಅಭಿಪ್ರಾಯ ನನಗೆ ಅರ್ಥವಾಗುವುದಿಲ್ಲ.

ಎರಡನೆಯದಾಗಿ ಲೇಬರ್ ಡಿಸ್ಪ್ಯೂಟ್‌ಗಳನ್ನು ಟ್ರಿಬ್ಯುನಲ್ಲಿಗೆ ಜಾಗ್ರತೆಯಾಗಿ ಕಳಿಸಲಿಲ್ಲವೆಂದು ಆಕ್ಷೇಪಣೆ ಮಾಡಿದರು. ಅವರು ಹೇಳಿದ್ದು ಹಿಂದೂಸ್ಥಾನ್ ಏರ್‌ಕ್ರಾಫ್ಟ್‌ಗೆ ಸಂಬಂಧಪಟ್ಟದ್ದು. ಇದು ತಪ್ಪು ಅಭಿಪ್ರಾಯ. ಈಗಲೂಕೂಡ ರಾಜಿ-ಒಪ್ಪಂದದಿಂದಲೇ ತೀರ್ಮಾನ ಮಾಡಿಕೊಳ್ಳುತ್ತೇವೆಂದು ಹೇಳಿ ಮೀಟಿಂಗ್‌ಗಳನ್ನು ನಡೆಸುತ್ತಿದ್ದಾರೆ. ಅವರು ಮಾಡಿರುವ ಮೀಟಿಂಗುಗಳ ವರದಿಯನ್ನು ನಮ್ಮ ಮುಂದಿಟ್ಟಿದ್ದಾರೆ. ನನ್ನ ಕಚೇರಿಗೆ ಬಂದು ತಾವು ರಾಜಿಯಿಂದಲೇ ಅನೇಕ ವಿಷಯಗಳನ್ನು ತೀರ್ಮಾನ ಮಾಡಿಕೊಳ್ಳುವುದಾಗಿ ಹೇಳಿ, ಒಪ್ಪಂದ ಮಾಡಿಕೊಂಡಿರುವುದನ್ನೂ ಮತ್ತು ಆ ರೀತಿ ಸರ್ಕಾರಕ್ಕೆ ತಿಳಿಸಿ ಸರ್ಕಾರದವರು ಮುಂದೆ ಮುಂದುವರಿಯುವುದನ್ನು ನಿಲ್ಲಿಸುವಂತೆ ಅಸೋಸಿಯೇಷನ್ನಿನವರು ಸರ್ಕಾರಕ್ಕೆ ಬರೆದುಕೊಳ್ಳಬೇಕೆಂದು ನಿಶ್ಚಯಿಸಿರುವುದನ್ನೂ ಹೇಳಿ ಆ ತೀರ್ಮಾನದ ನಕಲನ್ನು ಸಹ ನನಗೆ ಕೊಟ್ಟಿದ್ದಾರೆ. ಇದು ಆಗಿರುವುದು 11-6-1957 ರಲ್ಲಿ. ಮಾನ್ಯ ಸದಸ್ಯರಿಗೆ ಈ ಸಂಗತಿ ತಿಳಿಯದಿದ್ದುದರಿಂದ ಅವರು ತಪ್ಪು ಟೀಕೆ ಮಾಡಿದ್ದಾರೆಂದು ಹೇಳಬೇಕಾಗಿದೆ.

ಆಮೇಲೆ ನಿರ್ದಿಷ್ಟವಾಗಿ ಶ್ರೀ ಸೀತಾರಾಮಯ್ಯ ಅವರಿಗೆ ಸಂಬಂಧಿಸಿದಂತೆ ಒಬ್ಬ ವ್ಯಕ್ತಿಯನ್ನು ಉದಹರಿಸಿ ಅವರ ವಿಷಯವನ್ನು ತೀರ್ಮಾನ ಮಾಡದೆ ಬಾಕಿ ಇಟ್ಟಿದ್ದಾರೆಂದು ಹೇಳಿದರು. ಇದು ತೀರ್ಮಾನವಾಗಿರುವ ವಿಷಯವೆಂದು ಮಾನ್ಯ ಸದಸ್ಯರಿಗೆ

(ಶ್ರೀ ವೈಕುಂಠಬಾಳಿಗ)

ತಿಳಿದಿಲ್ಲವೆಂದು ಕಾಣುತ್ತದೆ. ಒಮ್ಮೆ ತೀರ್ಮಾನವಾದ ಮೇಲೆ ಆ ಮಾನ್ಯ ವ್ಯಕ್ತಿಗಳು ಪುನಃ ಈ ತೀರ್ಮಾನವನ್ನು ವಿಮರ್ಶೆ ಮಾಡಬೇಕೆಂದು ಮನವಿಮಾಡಿಕೊಂಡಿದ್ದಾರೆ. ಅದು ಈಗತಾನೆ ಸರ್ಕಾರಕ್ಕೆ ಬಂದಿದೆ ಮತ್ತು ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ನಾನು ತಿಳಿಸಬಯಸುತ್ತೇನೆ.

ಆಖೈರಾಗಿ ಕಾರ್ಮಿಕರ ವಿಷಯದಲ್ಲಿ ಯಾವ ರೀತಿಯಲ್ಲೂ ವಿಳಂಬ ಮಾಡದಂತೆ ನೋಡಿಕೊಳ್ಳುತ್ತೇವೆಂದು ಸಭೆಗೆ ಭರವಸೆ ಕೊಡುತ್ತೇನೆ.

ನಾನು ಇಂಗ್ಲೀಷಿನಲ್ಲಿ ಮಾಡಿದ ಭಾಷಣದ ಅರ್ಥವನ್ನು ಈಗ ಸಂಕ್ಷೇಪವಾಗಿ ಹೇಳಿದ್ದೇನೆ.

[ಒಬ್ಬ ಮರಾಠಿ ಸದಸ್ಯರು (ಮರಾಠಿಯಲ್ಲಿ).—ಮಾನ್ಯ ಮಂತ್ರಿಗಳು ಹೇಳಿದ್ದನ್ನು ಮರಾಠಿಯಲ್ಲಿ ಹೇಳುವಂತೆ ಅಪ್ಪಣೆಮಾಡಬೇಕು.]

ಚೇರ್ಮನ್ ಅವರು.—ಅಧ್ಯಕ್ಷರಿಗೆ ಗೊತ್ತಾಗದ ಮಾತಿನಲ್ಲಿ ಮಾತನಾಡಿದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ.

ಒಬ್ಬ ಸದಸ್ಯರು.—ಮಾನ್ಯ ಸದಸ್ಯರು ಮರಾಠಿಯಲ್ಲಿ ಮಾತನಾಡಬಹುದೇ?

ಚೇರ್ಮನ್ ಅವರು.—ಅಧ್ಯಕ್ಷರು ಮರಾಠಿಯಲ್ಲಿ ಮಾತನಾಡುವುದಕ್ಕೆ ಅವಕಾಶವುಂಟೆಂದು ಆಗಲೇ ರೂಲಿಂಗ್ ಕೊಟ್ಟಿರುವುದರಿಂದ ಅವರು ಮಾತನಾಡಿದ್ದಾರೆ. ಆದರೆ ಅವರೇನು ಹೇಳಿದರೋ ಅದು ನನಗೆ ತಿಳಿಯದ ಭಾಷೆಯಾಗಿದೆ. ಕನ್ನಡದಲ್ಲಿ ಅಥವಾ ಇಂಗ್ಲೀಷಿನಲ್ಲಿ ಮಾತನಾಡಿದರೆ ಅದರಮೇಲೆ ಉತ್ತರ ಕೊಡಬಹುದು. ನಮಗೆ ತಿಳಿಯದೆ ಇದ್ದುದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ಅವರಿಗೆ ಪ್ರಯೋಜನವಿಲ್ಲದ ಹಾಗಾಗುತ್ತದೆ.

ಶ್ರೀ ಟಿ. ಮರಿಯಪ್ಪ.—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಮಾನ್ಯ ಸದಸ್ಯರನೇಕರು ರಚನಾತ್ಮಕ ಟೀಕೆಗಳನ್ನು ಮಾಡಿದ್ದಾರೆ. ಅಲ್ಲಲ್ಲಿ ಕಟುವಾದ ಟೀಕೆಗಳೂ ಬಂದಿವೆ. ಟೀಕೆಗಳೆಲ್ಲವನ್ನೂ ಸರ್ಕಾರದವರು ಸ್ವಾಗತಿಸುತ್ತಾರೆ. ಆದರೆ ರಾಜ್ಯಪಾಲರ ಭಾಷಣದಲ್ಲಿ ಕೆಲವು ಅಂಶಗಳನ್ನು ನಮೂದಿಸಲಿಲ್ಲವೆಂಬ ಟೀಕೆಯು ಮಾತ್ರ ಅಷ್ಟು ಸಾಧುವಾದದ್ದಲ್ಲವೆಂದು ನಾನು ಬಹಳ ವಿನಯದಿಂದ ಹೇಳಬಯಸುತ್ತೇನೆ. ಸಾಮಾನ್ಯವಾಗಿ ರಾಜ್ಯಪಾಲರ ಭಾಷಣದಲ್ಲಿ ಸ್ಥೂಲವಾಗಿ ಸರ್ಕಾರದ ನೀತಿಯನ್ನು ಹೇಳಲಾಗುತ್ತದೆ. ಆಯವ್ಯಯ ಪಟ್ಟಿಯ ಮೇಲೆ ಅಥವಾ ಬೇಡಿಕೆಗಳಮೇಲೆ ನಡೆಯತಕ್ಕ ಚರ್ಚೆಯಲ್ಲಿ ಏನೇನು ಅಂಶಗಳು ಬರುತ್ತವೆಯೋ ಅವೆಲ್ಲವುಗಳನ್ನೂ ಈ Motion of Thanks ಮೇಲಿನ ಚರ್ಚೆಯಲ್ಲಿ ತರುವ ಪ್ರಯತ್ನ ನಡೆಯಿತು. ಅದಕ್ಕೆ ಬದಲು ಸ್ಥೂಲವಾಗಿ ಸರ್ಕಾರದ ನೀತಿಯ ಮೇಲೆ ಚರ್ಚೆ ನಡೆಸಿದ್ದರೆ ಬಹಳ ಚೆನ್ನಾಗಿತ್ತೆಂದು ನಾನು ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳಬಯಸುತ್ತೇನೆ. ಇದಕ್ಕಾಗಿಯೇ 'May's Parliamentary Practice' ನಲ್ಲಿ ಇಂಥ ಚರ್ಚೆಯ ಸಂಬಂಧದಲ್ಲಿ ಏನೇನು ಅಂಶಗಳನ್ನು ಹೇಳಬಹುದೆಂಬ ವಿಚಾರವನ್ನು ಅಲ್ಲಿ ಹೇಳಿರುವ ಪ್ರಕಾರ, ರಾಜ ಅಥವಾ ರಾಣಿಯ ಭಾಷಣದ ಮೇಲೆ ಹೌಸ್ ಆಫ್ ಕಾಮನ್ಸ್‌ನಲ್ಲಿ ಚರ್ಚೆ ನಡೆಯುವಾಗ ಸರ್ಕಾರದ main policies ಮೇಲೆ ಮಾತ್ರ ಮಾತನಾಡುತ್ತಾರೆ. ಇಲ್ಲಿನಂತೆ ಕೇವಲ ಒಂದು ಪಂಚಾಯತಿ ನಡೆಸತಕ್ಕ ವಿಷಯ ಮೊದಲಗೊಂಡು, ತುಮಕೂರು ಜಿಲ್ಲೆಯಲ್ಲಿ ಯಾವುದಾದರೂ ನಾಲೆ ಯಾಯಿತೇ ಇಲ್ಲವೇ ಎಂಬೆಲ್ಲ ವಿಷಯಗಳನ್ನೂ ಚರ್ಚೆ ಮಾಡುವುದು ಸಂಪ್ರದಾಯವಲ್ಲ. ಪ್ರಜಾ ಪ್ರಭುತ್ವದಲ್ಲಿ ನಾವೂ ವಿರೋಧ ಪಕ್ಷದವರೂ ಸೇರಿಕೊಂಡು ಒಳ್ಳೆಯ ಸಂಪ್ರದಾಯಗಳು ನೆಲಸುವಂತೆ ಮಾಡಬೇಕೆಂದು ತಮ್ಮ ಮೂಲಕ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಬಹಳ ಪ್ರಾಮುಖ್ಯವಾಗಿ ಸಮಾಜ ವ್ಯವಸ್ಥೆ ಹೇಗೆ ಆಗಬೇಕೆಂಬುದನ್ನು ಪ್ರಸ್ತಾಪ ಮಾಡಿದ್ದಾರೆ. ರಾಜ್ಯಪಾಲರ ಭಾಷಣದಲ್ಲೂ ಇದು ಪ್ರಸ್ತಾಪಿಸಲ್ಪಟ್ಟಿದೆ. ಅದು ಆಗಬೇಕಾದದ್ದು ಬಹಳ ಅಗತ್ಯವೆಂದು ಮಾನ್ಯ ಸದಸ್ಯರೆಲ್ಲರೂ ಅಭಿಪ್ರಾಯಪಟ್ಟರು. ಅದರಲ್ಲೂ ಮಾನ್ಯ ಸ್ನೇಹಿತರಾದ ಶ್ರೀ ನರಸಿಂಹರ್ ಅವರು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಏನು ಗುರಿಯಿಟ್ಟುಕೊಂಡಿದ್ದಾರೋ ಆ ಗುರಿಯಲ್ಲಿ ಕೊಂಚವೂ ಕಡಮೆ ಮಾಡಬಾರದು; ಆದರೆ ಕಾಂಗ್ರೆಸ್ ಸರಕಾರ ಮಾತನಾಡುವುದೊಂದು, ನಡೆಯುವುದೊಂದು ಎಂದು ಹೇಳಿದರು. ನಾನವರಿಗೆ ವಿನಯದಿಂದ ಹೇಳುತ್ತೇನೆ: ಅವರು ತಮ್ಮ ಫಿಲಾಸಫಿಗನುಗುಣವಾಗಿ ಮಾತನಾಡಿದ್ದಾರೆಯೇ ಹೊರತು, ನಮ್ಮ ದೇಶದ ಹಿನ್ನೆಲೆಯನ್ನು ನೋಡಿಕೊಂಡು ಪಾರ್ಲಿಮೆಂಟಿನವರು ಯಾವ ತತ್ತ್ವದೃಷ್ಟಿಯಿಂದ ಇದನ್ನು ಅಂಗೀಕರಿಸಿದರೆಂಬುದನ್ನು ಹೇಳಲಿಲ್ಲ. ಕಾಂಗ್ರೆಸ್ ಮಹಾಸಭೆಯವರು ಆವಡಿಯಲ್ಲಿ ಯಾವ ನಿರ್ಣಯವನ್ನಂಗೀಕರಿಸಿದರೋ ಅದು ಕಾಂಗ್ರೆಸ್ಸನ್ನು ಮಾತ್ರ ಬಂಧಿಸಿತ್ತು. ಆದರೆ 1954 ನೆಯ ಇಸವಿಯಲ್ಲಿ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು ಅಂಗೀಕರಿಸಿರುವ ನಿರ್ಣಯ ಇಡಿಯ ಇಂಡಿಯಾ ದೇಶವನ್ನು ಬಂಧಿಸುತ್ತದೆ. ಆ ತತ್ತ್ವದ ಮೇಲೆ ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಮಾಡಿ ದ್ದಾರೆ. ಇದನ್ನು ಎಲ್ಲ ಪಕ್ಷದವರೂ ಸ್ವಾಗತಿಸಿದ್ದಾರೆ. ವಿರೋಧಪಕ್ಷದ ನಾಯಕರಾದ ಡಾಂಗೆಯವರೇ ಇದನ್ನು ಸ್ವಾಗತಿಸಿರುವುದಲ್ಲದೆ, ಅದನ್ನು ಕಡಮೆ ಮಾಡಕೂಡದೆಂದು ಕೂಡ ಹೇಳಿದ್ದಾರೆ. ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಸಂಪೂರ್ಣವಾಗಿ ಕಾರ್ಯಗತ ಮಾಡುವುದು ಅಗತ್ಯ, ಅಷ್ಟೇ ಅಲ್ಲ, ಇಂಥ ಹಲವಾರು ಯೋಜನೆಗಳನ್ನು ಮಾಡುವುದೂ ಅಗತ್ಯ ವೆಂದು ಅವರು ಹೇಳಿದ್ದಾರೆ.

11-30 A.M.

ಇನ್ನು ನನ್ನ ಮಿತ್ರರು ಕೆಲವರು ಅಪ್ರತ್ಯಕ್ಷವಾಗಿ ಅನೇಕ ಪದಾರ್ಥಗಳ ಮೇಲೆ ತೆರಿಗೆಯನ್ನು ಜಾಸ್ತಿ ಮಾಡಿದ್ದಾರೆ, ಪ್ರತ್ಯಕ್ಷವಾಗಿ ಕೆಲವು ಪದಾರ್ಥಗಳ ಮೇಲೆ ತೆರಿಗೆಯನ್ನು ಕಡಮೆಮಾಡಿದ್ದಾರೆ ಎಂದು ಹೇಳಿದರು. ಪ್ರಾಯಶಃ ಅವರ ಗಮನವನ್ನು ಕೇಂದ್ರ ಸರ್ಕಾರದ ಹಣಕಾಸಿನ ಸಚಿವರು ಮಾಡಿದಂಥ ಬಡ್ಜೆಟ್ ಭಾಷಣದಕಡೆಗೆ ಸೆಳೆಯಬೇಕಾಗಿದೆ. ಏಕೆಂದರೆ ಅದರಲ್ಲಿ ಸಿಬ್ಬಂದಿಯನ್ನು ಕಡಮೆಮಾಡಲು ಕ್ರಮ ತೆಗೆದುಕೊಂಡಿದ್ದಾರೆ. ಆದರೆ ಟಾಪ್ ಸ್ಲ್ಯಾಬ್ಸ್ ಏಕೆ ಕಡಮೆ ಮಾಡಿದರು ಮತ್ತು ವೆಲ್ತ್ ಮತ್ತು ಎಕ್ಸ್‌ಪೆಂಡಿಚರ್ ಟ್ಯಾಕ್ಸ್ ಏಕೆ ಹಾಕಿದರು ಎಂಬುದನ್ನು ಮರೆತಿದ್ದಾರೆ. ಪಬ್ಲಿಕ್ ಇನ್‌ವೆಸ್ಟ್‌ಮೆಂಟಿಗೋಸ್ಕರ ಟಾಪ್‌ಸ್ಲ್ಯಾಬನ್ನು ಕಡಮೆಮಾಡಿ ವೆಲ್ತ್ ಮತ್ತು ಎಕ್ಸ್‌ಪೆಂಡಿಚರ್ ಮೇಲೆ ತೆರಿಗೆ ವಿಧಿಸಿ, ಇನ್‌ವೆಸ್ಟ್‌ಮೆಂಟಿನಮೇಲೆ ವಿನಾಯಿತಿ ಮಾಡಿದ್ದಾರೆ. ಆದರೆ ಪ್ರತ್ಯಕ್ಷವಾದ ತೆರಿಗೆ ಕಡಮೆಯಾಯಿತು ಎಂದು ಹೇಳಿದ್ದಾರೆ ಎಂದು ಹೇಳುವುದಕ್ಕೆ ಯಾವ ಆಧಾರವೂ ಇಲ್ಲ. ಕೇಂದ್ರ ಸರ್ಕಾರದವರು ನಮ್ಮ ದೇಶದ ತೆರಿಗೆಗಳನ್ನು ಬಹಳ ಎಚ್ಚರಿಕೆಯಿಂದ ಪರಿಶೀಲನೆಮಾಡಿದ್ದಾರೆ. ಬಹಳ ದಕ್ಷರೂ ಮತ್ತು ನಿಪುಣರೂ ಆದಂಥವ

ರಿಂದ ನಮ್ಮ ತೆರಿಗೆಗಳನ್ನು ಪರಿಶೀಲನೆಮಾಡಿಸಿದ್ದಾರೆ. ಡಾ|| ಜಾನ್‌ಮಥಾಯ್ ಅವರು ಮತ್ತು ಪ್ರೊ|| ಕಾಡಾರ್ ಅವರು ನಮ್ಮ ದೇಶದ ತೆರಿಗೆಗಳ ವಿಚಾರದಲ್ಲಿ ದೀರ್ಘವಾಗಿ ಪರಿಶೀಲನೆಮಾಡಿ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಇವರಿಬ್ಬರ ಸಲಹೆಗಳನ್ನೂ ಸಮನ್ವಯಮಾಡಿ ಅಂತರ ರಾಷ್ಟ್ರೀಯ ಪರಿಸ್ಥಿತಿಯನ್ನು ನೋಡಿಕೊಂಡು ನಮ್ಮ ದೇಶದಲ್ಲಿ ಹೊಸದಾಗಿ ಒಂದು ಸಮಾಜವನ್ನು ಸ್ಥಾಪನೆಮಾಡಬೇಕಾದರೆ, ಪುಣ್ಯವಂತರಿಗೂ ಬಡವರಿಗೂ ಇರುವ ಅಂತರವನ್ನು ಕಡಮೆಮಾಡಿ, ಎಕನಾಮಿಕ್ ಪವರ್ ಒಂದೇಕಡೆ ಸೇರದೆ ಇರುವ ಹಾಗೆ ಒಂದು ದೃಷ್ಟಿಯಿಂದ ಕೇಂದ್ರದವರು ತಮ್ಮ ಬಜೆಟ್ಟಿನಲ್ಲಿ ವಿಧಿಯಿಲ್ಲದೆ ಕೆಲವು ತೆರಿಗೆಗಳನ್ನು ವಿಧಿಸಬೇಕಾಗಿ ಬಂದಿದೆ. ಆದ್ದರಿಂದ ಸದಸ್ಯರು ಹಾಗೆ ನಿರಾಧಾರವಾಗಿ ಟೀಕೆಮಾಡಿದರೆ ಅದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಕೇಂದ್ರದ ಪಾರ್ಲಿಮೆಂಟಿನ ನಾಯಕರು ಅವರ ಮನಸ್ಸಿನಲ್ಲಿರುವ ವಿಷಯಗಳನ್ನು ಒಂದು ನೀತಿಗನುಗುಣವಾಗಿ ಸಮರ್ಥಿಸಿದ್ದಾರೆ ಎಂದು ನಾನು ಇನ್ನೂ ಸ್ಪಷ್ಟವಾಗಿ ತಿಳಿಸಬೇಕಾಗಿದೆ. ಆದರೆ ಅವರ ಮನಸ್ಸಿನಲ್ಲಿರುವ ಒಂದು ಮುಖ್ಯವಾದ ವಿಷಯವನ್ನು ಎಲ್ಲರೂ ತಿಳಿದುಕೊಳ್ಳಬೇಕಾಗಿದೆ. ಅವರ ಗುರಿ ಮತ್ತು ಆ ಗುರಿಯ ಸಾಧನೆಗೆ ಅವರಲ್ಲಿರುವ ಒಂದು ಫಿಲಾಸಫಿ—ಇವೆರಡಕ್ಕೂ ವಿಶೇಷವಾದ ವ್ಯತ್ಯಾಸವಿದೆ. ಅವರ ಮಾರ್ಗಗಳನ್ನು ಅನುಸರಿಸಬೇಕಾದರೆ ಬಹಳ ಕಷ್ಟವಿದೆ. ನಮ್ಮ ದೇಶದ ಸಂಪ್ರದಾಯವೇ ಬೇರೆ. ನಾವು ಯಾವ ಸಮಾಜವನ್ನು ನಿರ್ಮಾಣಮಾಡುತ್ತೇವೋ ಅದು ನಮ್ಮ ಹಿನ್ನೆಲೆಗೆ ಮತ್ತು ನಮ್ಮ ಸಂಪ್ರದಾಯಕ್ಕನುಗುಣವಾಗಿರಬೇಕಾಗಿದೆ. ಮಹಾತ್ಮಾ ಗಾಂಧೀಜಿಯವರು ಹೇಳಿದಂತೆ ನಾವು ಪಾಶ್ಚಾತ್ಯ ದೇಶದವರನ್ನು ಅನುಕರಣಮಾಡಬೇಕಿಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ).—ನೀವು ಆರೀತಿ ಅನುಸರಿಸುವುದಕ್ಕಾಗುವುದೂ ಇಲ್ಲವೆಂದು ಹೇಳಿದ್ದಾರೆ. It is more in the nature of propaganda.

Sri T. MARIAPPA.—It is not at all propaganda. I was obliged to answer him effectively. ದೇಶದಲ್ಲಿ ಈಗ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಏನೇನು ಅಂಶಗಳನ್ನು ನಮೂದುಮಾಡಿದ್ದೇವೋ, ಅವು ಹೊಸ ಸಮಾಜವನ್ನು ಸೃಷ್ಟಿ ಮಾಡುವುದಕ್ಕೆ ಸಾಧಕವಾಗಿವೆ. ಶ್ರೀ ವೀರಪ್ಪ ಅವರು ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿಯನ್ನು ಸ್ಥಾಪಿಸಲು ಯಾವ ರೀತಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬುದನ್ನು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇದನ್ನು ಕೇಳಿ ಮಾನ್ಯ ಸದಸ್ಯರು ಈ ವಿಷಯಗಳನ್ನೆಲ್ಲ ಸ್ಥೂಲವಾಗಿ ಪರಿಶೀಲನೆಮಾಡಿದ್ದಾರೋ ಇಲ್ಲವೋ ಎಂಬ ಸಂಶಯ ನನಗೆ ಬರುತ್ತದೆ. ಅವರು ಇನ್ನು ಒಂದು ವಿಷಯವನ್ನು ಹೇಳಿದರು. ದ್ವಿತೀಯ ಪಂಚವಾರ್ಷಿಕ ಯೋಜನೆಯ ಗುರಿಯನ್ನು ಮುಟ್ಟುವುದಕ್ಕೋಸ್ಕರ ಯಾವೊಂದು ಕ್ರಮದಲ್ಲೂ ಒಂದು ನೀತಿಯೇ ಇಲ್ಲವೆಂದು ಹೇಳಿದರು. ನಮ್ಮ ಗುರಿ ಒಂದು ಯೋಜನಾಬದ್ಧವಾಗಿ ಮತ್ತು ಒಂದು ಸಂಪ್ರದಾಯಕ್ಕನುಗುಣವಾಗಿ ಇರಬೇಕಾಗಿದೆಯೇ ಹೊರತು ಪಾಶ್ಚಾತ್ಯರ ರೀತಿಯನ್ನು ಇಟ್ಟುಕೊಂಡು ನಡೆಯುತ್ತಾ ಇಲ್ಲವೆಂಬುದನ್ನು ನಾನು ಸ್ಪಷ್ಟೀಕರಿಸುತ್ತೇನೆ. ಇನ್ನು ಕೆಲವರು ಪಾನನಿರೋಧದ ವಿಷಯದಲ್ಲಿ ಯಾವ ವಿಧವಾದ ಸ್ಪಷ್ಟ ನೀತಿಯನ್ನೂ ಹೇಳಲಿಲ್ಲ ಎಂದು ಹೇಳಿದರು, ನಿಜ. ಪಾನನಿರೋಧದ ವಿಷಯದಲ್ಲಿ ಯಾವುದನ್ನೂ ಕೂಡ ರಾಜ್ಯಪಾಲರ ಭಾಷಣದಲ್ಲಿ ಹೇಳಲಿಲ್ಲ. ಅನೇಕ ಸಂದರ್ಭಗಳಲ್ಲಿ ಈ ವಿಷಯವನ್ನು ಸ್ಪಷ್ಟೀಕರಿಸಿದ್ದೇವೆ. ಆದರೆ ಒಂದೇಸಾರಿ ಎಲ್ಲಕಡೆಗಳಲ್ಲೂ ಸಂಸ್ಥಾನಾದ್ಯಂತ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಎಲ್ಲ ಸದಸ್ಯರೂ ಹೇಳಿ ಒತ್ತಾಯಮಾಡಿದ್ದಾರೆ. ಈ ಸಂದರ್ಭದಲ್ಲಿ ನನ್ನ ಮಾನ್ಯ ಸ್ನೇಹಿತರು ಕ್ಲೋಸ್‌ಪೇಟೆ ಮತ್ತು ಚನ್ನಪಟ್ಟಣಗಳ ವಿಷಯ ಪ್ರಸ್ತಾಪಮಾಡಿದ್ದಾರೆ. ಆ ವಿಷಯ ನಮಗೆ ತಿಳಿದಿಲ್ಲವೆಂದು ಅವರು ಯಾರೂ ಅಭಿಪ್ರಾಯಪಡಬಾರದು. ಅದಕ್ಕೆ ಯಾವ ಮಾಹಿತಿಯೂ ಇಲ್ಲವೆಂದೂ ಹೇಳಬಾರದು. ಈ ವಿಷಯದಲ್ಲಿ ಗ್ರಾಜುಯಲ್ಲಾಗಿ, ಒಂದು ಕ್ರಮವಾಗಿ, ಕಾರ್ಯನಿರ್ವಹಣೆ ಮಾಡಬೇಕಾಗಿದೆ. ಏಕೆಂದರೆ ಈ ಮದ್ಯಪಾನ ನಿರೋಧವನ್ನು ಸಂಸ್ಥಾನಾದ್ಯಂತ ಜಾರಿಗೆ ತರಬೇಕಾದರೆ ಬಹಳ ಕಷ್ಟವಿದೆಯೆಂಬುದನ್ನು ಮಾನ್ಯ ಸದಸ್ಯರು ಮನಗಾಣಬೇಕಾಗಿದೆ. ಬಾಯಲ್ಲಿ ಪಾನನಿರೋಧವನ್ನು ಜಾರಿಗೆ ಕೊಡಬೇಕೆಂದು ಹೇಳಿದಂತೆಯೇ ಮನಸ್ಸಿನಲ್ಲಿಯೂ ಅದೇ ವ್ಯವಧಾನದಿಂದ ನಡೆದುಕೊಳ್ಳಬೇಕು. ಅಲ್ಲಲ್ಲಿ ಇಲ್ಲಿ ಸಿಟ್ ಡಿಸ್ಟಿಲೇಷನ್ ನಡೆದರೂ, ಪಾನನಿರೋಧದಿಂದ ಬಹಳ ಜನರಿಗೆ ಅನುಕೂಲವಾಗಿದೆ. ಇದನ್ನು ನಾನು ಕಣ್ಣಾರ ನೋಡಿದ್ದೇನೆ. ಇದರಿಂದ ಅನುಕೂಲವಾಗಿರುವುದನ್ನು ಮಾನ್ಯ ಸದಸ್ಯರೂ ನೋಡಿದ್ದಾರೆ. ಆದ್ದರಿಂದ ಇದರಿಂದಾಗತಕ್ಕ ಪ್ರಯೋಜನ ಅಲ್ಲಗಳೆಯುವಂಥದಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಹಾಗೆ ಅನುಕೂಲವಾಗುವುದಾದರೆ, ಆ ರೀತಿ ಎಲ್ಲರಿಗೂ ಅನುಕೂಲ ಮಾಡಿಕೊಡಿ.

Sri M. RAMAPPA (Harihara).—What is the difficulty in introducing it in other districts? No reply has been given to that.

Sri T. MARIAPPA.—I am not prepared to yield.

Mr. CHAIRMAN.—The Hon'ble Minister is not yielding.

ಶ್ರೀ ಟಿ. ಮರಿಯಪ್ಪ.—ಈ ಸಮಯದಲ್ಲಿ ಆ ಪ್ರಶ್ನೆಗೆ ಉತ್ತರ ಹೇಳಲಾರೆ. ಬಡ್ಜೆಟ್ ಮಂಡಿಸುವಾಗ ಅದಕ್ಕೆ ಉತ್ತರ ಹೇಳುತ್ತೇನೆ. ನಾನು ಪಾನನಿರೋಧದಿಂದ ಅನುಕೂಲವಾಗುವುದಿಲ್ಲವೆಂದು ಹೇಳುವುದಿಲ್ಲ. ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಪಾನನಿರೋಧವನ್ನು ಜಾರಿಗೆ ತರುತ್ತೇವೆ. ಪೋಲೀಸಿನವರಿಗೆ ಇಷ್ಟೇ ಕೇಸುಗಳನ್ನು ಹಾಕಬೇಕೆಂಬ ನಿಗದಿ ಏನೂಮಾಡಿಲ್ಲ. ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯ ಕೇಸುಗಳನ್ನು ಸರಿಯಾಗಿ ವಿಚಾರಮಾಡದೆ ಕೇಸುಗಳನ್ನು ಹಾಕಬೇಡಿ ಎಂಬುದಾಗಿ ಅವರಿಗೆ ಸಲಹೆಗಳನ್ನು ಕೊಟ್ಟಿದ್ದೇವೆ. ಪಾನನಿರೋಧವನ್ನು ಕ್ರಮವಾಗಿ ಒಂದು ಕಡೆಯಿಂದ ಕನ್ಸಾಲಿಡೇಟ್ ಮಾಡಿಕೊಂಡು ಜಾರಿಗೆತರಬೇಕು ಎನ್ನುವ ಒಂದು ನೀತಿಯನ್ನು ಅನುಸರಿಸಿಕೊಂಡು ಬಂದಿದ್ದೇವೆ. ಈಗಾಗಲೇ ಬಹಳ ಭಾಗಗಳಲ್ಲಿ ಮದ್ಯಪಾನನಿರೋಧ ಜಾರಿಯಲ್ಲಿದೆ. ಇತ್ತೀಚೆಗೆ 7–8 ವರುಷಗಳಲ್ಲಿ ಕೋಲಾರ ಮತ್ತು ಹಾಸನದ ಜಿಲ್ಲೆಗಳ ಕೆಲವು ತಾಲ್ಲೂಕುಗಳಲ್ಲಿ ಪಾನನಿರೋಧವನ್ನು ಜಾರಿಗೆ ತರಲಾಗಿದೆ.

ಇನ್ನು ನಿರುದ್ಯೋಗ ಸಮಸ್ಯೆಯನ್ನು ಪ್ರತ್ಯೇಕವಾಗಿ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಮಾಡಲಿಲ್ಲ ಎಂಬುದಾಗಿ ಕೆಲವು ಮಾನ್ಯ ಸದಸ್ಯರು ಹೇಳಿದರು,

(ಶ್ರೀ ಟಿ. ಮರಿಯಪ್ಪ)

ನಿಜ. ಈ ವಿಷಯದಲ್ಲಿ ಮಾನ್ಯ ಸದಸ್ಯರು ಸ್ವಲ್ಪ ಆಲೋಚನೆ ಮಾಡಿದರೆ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಕಡ್ಡಾಯವಾಗಿ ಈ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬೇಕು. ಇಡಿಯ ದೇಶದಲ್ಲಿರುವ ಜನತೆಗೆ ಆದಷ್ಟುಮಟ್ಟಿಗೆ ಉದ್ಯೋಗಗಳನ್ನು ಕಲ್ಪಿಸಿಕೊಡಬೇಕು ಎಂಬ ಉದ್ದೇಶವನ್ನು ನಮ್ಮ ಸರ್ಕಾರದವರು ಇಟ್ಟುಕೊಂಡಿರುವುದು ಗೊತ್ತಾಗುತ್ತದೆ. ನಮ್ಮ ದೇಶದಲ್ಲಿ ಅಗ್ರಿಕಲ್ಚರಲ್ ಪ್ರೊಡಕ್ಷನ್ ಹೆಚ್ಚಾಗಿ ಆಗಬೇಕು, ಕೈಗಾರಿಕೆಗಳು ಅಭಿವೃದ್ಧಿಯಾಗಬೇಕು, ಗ್ರಾಮ ಕೈಗಾರಿಕೆಗಳಿಗೆ ಹೆಚ್ಚಾಗಿ ಉತ್ತೇಜನ ಕೊಡಬೇಕು. ಈಗ ದೇಶದಲ್ಲಿರುವ ಬಡತನ ಮತ್ತು ನಿರುದ್ಯೋಗ—ಈ ಎರಡು ಸಮಸ್ಯೆಗಳನ್ನು ತೊಡೆದುಹಾಕಬೇಕೆಂದು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಮುಖ್ಯವಾಗಿ ಹೇಳಿದೆ. ಈ ದೃಷ್ಟಿಯಿಂದ ನಾವು ಈ ವಿಚಾರದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಪ್ರತ್ಯೇಕವಾಗಿ ಪ್ರಸ್ತಾಪಮಾಡಲಿಲ್ಲ.

ಮಲೆನಾಡಿನ ಅಭಿವೃದ್ಧಿಯ ವಿಷಯವಾಗಿ ರಾಜ್ಯಪಾಲರ ಭಾಷಣದಲ್ಲಿ ನಮೂದಾಗಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ಎರಡನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಏನೇನು ಸೂಕ್ತವಾದ ಕ್ರಮಗಳು ಆವಶ್ಯಕವಾಗಿವೆಯೋ ಅವೆಲ್ಲವನ್ನೂ ಮಲೆನಾಡಿನ ಅಭಿವೃದ್ಧಿಯ ವಿಷಯದಲ್ಲಿ ತೆಗೆದುಕೊಳ್ಳಲಾಗುವುದು. ಮಲೆನಾಡ ಸಮ್ಮೇಳನವು ಮಾಡಿದ ಶಿಫಾರಸುಗಳನ್ನು ಪರಿಶೀಲನೆಮಾಡಲಾಗುತ್ತಿದೆ.

ಮಾನ್ಯ ಸದಸ್ಯರುಗಳು ಇನ್ನೂ ಅನೇಕ ಅಂಶಗಳನ್ನು ಎತ್ತಿ ಸರಕಾರದ ಕೆಲಸಕಾರ್ಯಗಳು ನಿಧಾನವಾಗುತ್ತಿದೆ, ಲಂಚ-ರುಷುವತ್ತು ಇದೆ ಎಂದು ಹೇಳಿದರು. ಈ ವಿಷಯದ ಬಗ್ಗೆ ಬಹು ವಿನಯದಿಂದ ನಾನು ಹೇಳುವುದೇನೆಂದರೆ ಈ ಸಭೆ ಮತ್ತು ಈ ರಾಜ್ಯ ಹೊಸದು. ಆದುದರಿಂದ ಹಳೆಯ ಮೈಸೂರು ರಾಜ್ಯದಲ್ಲಿ ಏನು ನಡೆಯಿತು ಅದನ್ನು ಈಗ ಪ್ರಸ್ತಾಪಮಾಡುವುದು ಸೂಕ್ತವಾಗುವುದಿಲ್ಲ. ಮುಂಬಯಿ ಕರ್ನಾಟಕ, ಹೈದ್ರಾಬಾದ ಕರ್ನಾಟಕದಿಂದ ಹೊಸ ಮೈಸೂರ ರಾಜ್ಯದಲ್ಲಿ ಸೇರ್ಪಡೆಯಾದ ಪ್ರದೇಶಗಳ ಬಗ್ಗೆ ಇರುವ ಅನೇಕ ವಿಷಯಗಳನ್ನು ಸ್ಪಷ್ಟೀಕರಿಸಬೇಕಾಗಿದೆ. ಹಳೆಯ ಮೈಸೂರಿನ ಹಿಂದಿನ ವಿಷಯಗಳನ್ನು ಅಷ್ಟೇ ಪ್ರಸ್ತಾಪ ಮಾಡುವುದು ಅಪ್ರಕೃತ. ಒಂದನೆಯ ನವಂಬರದ ಅನಂತರ ಸಂಬಂಧಪಟ್ಟ ವಿಷಯವನ್ನು ಪ್ರಸ್ತಾಪ ಮಾಡಿದರೆ ಅದು ಪ್ರಕೃತ. ಏಕೆಂದರೆ ಒಂದನೆಯ ನವಂಬರದ ಅನಂತರ ಇರುವ ಜವಾಬ್ದಾರಿಯು ನಮಗೆ ಇದೆ.

ಕೆಲವು ಮರಾಠಿ ಮಿತ್ರರು ತಮ್ಮ ಭಾಷಣದಲ್ಲಿ ಮುಖ್ಯವಾಗಿ ಭಾಷೆಯ ಪ್ರಶ್ನೆ ಮತ್ತು ಗಡಿ ಪ್ರಶ್ನೆಗಳನ್ನು ಎತ್ತಿದರು. ಈ ವಿಷಯವನ್ನು ಅವರು ಪ್ರಸ್ತಾಪಮಾಡದೇ ಇದ್ದಿದ್ದರೆ ಚೆನ್ನಾಗಿತ್ತು. ಅನಾವಶ್ಯಕವಾಗಿ ಈ ವಿಷಯವನ್ನು ಪ್ರಸ್ತಾಪಮಾಡಿದ್ದು ವಿಷಾದಕರ. ಗಡಿ ನಿರ್ಣಯದ ವಿಷಯವನ್ನು ಝೋನಲ್ ಕೌನ್ಸಿಲ್ಲಿಗೆ ಬಿಟ್ಟುಬಿಡುವುದು ಉತ್ತಮ. ಏಕೆಂದರೆ ಈ ವಿಷಯವು ಝೋನಲ್ ಕೌನ್ಸಿಲ್ಲಿಗೆ ಸಂಬಂಧಪಟ್ಟದ್ದಾಗಿದೆ. ರಾಜ್ಯಪುನರ್ವಿಂಗಡಣೆಯ ವಿಷಯವು ಒಮ್ಮೆ ನಿರ್ಧಾರವಾಗಿಬಿಟ್ಟಿದೆ. ಇದು *fait accompli*. ಈ ರೀತಿಯಾಗಿರುವಾಗ ಪುನಃ ಪುನಃ ಅದನ್ನೇ ಕೆದಕುವುದು ಯೋಗ್ಯವಲ್ಲ.

ಇನ್ನು ಎರಡನೆಯ ವಿಷಯ ; ಮಂತ್ರಿಗಳು ಬಹಳ ಪ್ರವಾಸ ಮಾಡುತ್ತಾರೆ ಮತ್ತು ಸಮಾರಂಭಗಳಲ್ಲಿ ಭಾಗವಹಿಸುತ್ತಾರೆ ಎಂಬುದು. ನನಗೆ ಎಲ್ಲ ಹೊಸ ಮತ್ತು ಹಳೆಯ ಸದಸ್ಯರ ಪರಿಚಯವಿದೆ. ಈ ವಿಷಯ ಪ್ರಸ್ತಾಪಮಾಡಿದ ಸದಸ್ಯರೇ ಮಂತ್ರಿಗಳನ್ನು ಕರೆದುಕೊಂಡುಹೋಗಿ ಮೆರವಣಿಗೆ ತೆಗೆದದ್ದು ನನಗೆ ಗೊತ್ತಿದೆ. ಇದಕ್ಕೆ ಉದಾಹರಣೆಯನ್ನು ಕೊಡಬಹುದು. ಆ ಸದಸ್ಯರ ಜೊತೆಯಲ್ಲಿ 27 ವರ್ಷ ಕಾಲ ಈ ಸಭೆಯಲ್ಲಿ ಇದ್ದೇನೆ. ಈಗ ಮುಖ್ಯವಾಗಿ ಹೇಳುವುದೇನೆಂದರೆ, ಹೊಸ ರಾಜ್ಯವಾಯಿತು ; ಹೊಸ ಮಂತ್ರಿಮಂಡಳ ಬಂದಿತು. ವಿಸ್ತಾರವಾದ ನಮ್ಮ ರಾಜ್ಯದಲ್ಲಿಯ ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ಕಂಡು ಎಲ್ಲ ವಿಷಯವನ್ನು ಅರಿತುಕೊಳ್ಳುವುದು ಅವಶ್ಯವಾಗಿ ಕಂಡುಬಂದುದರಿಂದ ಹೊಸದಾಗಿ ಸೇರ್ಪಡೆಯಾದ ಪ್ರದೇಶಗಳಲ್ಲಿ ಮಂತ್ರಿಗಳು ಸಂಚಾರ ಕೈಕೊಳ್ಳಬೇಕಾಯಿತು. ಹೊಸದಾಗಿ ಬಂದಿರುವ ಪ್ರದೇಶವನ್ನು ನೋಡಬೇಕಾದ ಸಂದರ್ಭವಿತ್ತು. ಏಕೆಂದರೆ ಅಲ್ಲಿಯ ಪರಿಸ್ಥಿತಿ ಹೇಗಿದೆ ಎಂಬುದು ಗೊತ್ತಿರಲಿಲ್ಲ. ಅನಾವಶ್ಯಕವಾಗಿ ಯಾವ ಮಂತ್ರಿಯೂ ಪ್ರವಾಸಮಾಡಿಲ್ಲ. ಒಂದು ಸಾರಿಯಾದರೂ ಆಯಾ ಪ್ರದೇಶಗಳನ್ನು ನೋಡಿಬಿಟ್ಟರೆ ಸಾಕು. ಅನಾವಶ್ಯಕವಾಗಿ ಪ್ರವಾಸ ಮಾಡಕೂಡದೆಂದು ನಾವು ಈಗ ಒಂದು ನಿರ್ಧಾರಮಾಡಿದ್ದೇವೆ. ಮಂತ್ರಿಗಳು ಸಮಾರಂಭಗಳಿಗೆ ಆದಷ್ಟುಮಟ್ಟಿಗೆ ಹೋಗಬಾರದೆಂದು ಸಹ ನಿರ್ಧಾರಮಾಡಿದ್ದೇವೆ. ಮಂತ್ರಿಯಾಗಿ ಇದ್ದಾಗಲೂ ಮತ್ತು ಮಂತ್ರಿಪದವಿಯನ್ನು ಬಿಟ್ಟು ಹೊರಗೆ ಹೋದಾಗಲೂ ಯಾವ ಪರಿಸ್ಥಿತಿಯು ಉಂಟಾಗುತ್ತದೆ ಎಂಬುದು ನನಗೆ ಚನ್ನಾಗಿ ಗೊತ್ತಿದೆ.

ಸೆಕ್ರೆಟೆರಿಯಟ್ಟಿನಲ್ಲಿ ಕಾಗದಪತ್ರಗಳ ಮೇಲೆ ನಿರ್ಣಯ ತೆಗೆದುಕೊಳ್ಳುವುದಕ್ಕೆ ಬಹಳ ತಡವಾಗುತ್ತದೆಂದು ಇನ್ನೊಬ್ಬ ಸದಸ್ಯರು ಆಕ್ಷೇಪಣೆ ಮಾಡಿದರು. ಹೀಗೆ ಏಕೆ ಆಯಿತು ಎಂದರೆ ಹಳೆಯ ಸೆಕ್ರೆಟೇರಿಯಟ್ ಬಿಲ್ಡಿಂಗ್‌ನಿಂದ ಹೊಸದಾಗಿ ಕಟ್ಟಿಸಿದ ವಿಧಾನಸೌಧಕ್ಕೆ ಕಾಗದಪತ್ರಗಳನ್ನು ರಿಕಾರ್ಡುಗಳನ್ನು ಆಫೀಸುಗಳನ್ನು ಸ್ಥಳಾಂತರಿಸುವುದರಲ್ಲಿ ಕಾಲವಿಳಂಬವಾಯಿತು. ಅದಲ್ಲದೆ ಹೊಸದಾಗಿ ಸೇರ್ಪಡೆಯಾದ ಪ್ರದೇಶದಿಂದ ಬಂದಿರುವ ಸರಕಾರಿ ನೌಕರರು ಎಲ್ಲರೂ ಹೊಸಬರು ಮತ್ತು ಆ ಭಾಗದಿಂದ ಬಂದಂಥ ಅನೇಕ ಫಾಯಿಲುಗಳನ್ನು ನೋಡಬೇಕಾಯಿತು. ಇಲ್ಲಿಯ ಕೆಲಸ ಅವರಿಗೆ ಹೊಸದು. ಹೀಗೆ ಇದ್ದರೂ ಬಹಳ ಶ್ರಮವಹಿಸಿ ನೌಕರರು ಕೆಲಸಮಾಡಿದ್ದಾರೆ. ಕೆಲವೊಂದು ತಿದ್ದಲಾರದ ನೌಕರರ ಉದಾಹರಣೆಗಳು ಇರಬಹುದು. ಹಣಕಾಸಿನ ಇಲಾಖೆಯ ಬಗ್ಗೆ ಹೇಳುವುದಾದರೆ ಅಲ್ಲಿಯ ಸರಕಾರಿ ನೌಕರರು ನಾಲ್ಕುಸಾರಿ ಬಜ್ಜೆಟ್ಟನ್ನು ಶ್ರಮವಹಿಸಿ ಹೆಚ್ಚುಕಾಲ ಕೆಲಸಮಾಡಿ ತಯಾರುಮಾಡಿದ್ದಾರೆ. ಮೊದಲು ರಫ್ ಬಜ್ಜೆಟ್ ತಯಾರುಮಾಡಲಾಯಿತು. ಡಿಸೆಂಬರ್ ಸೆಷನ್ನಿನಲ್ಲಿ ಪುನಃ ತಯಾರುಮಾಡಬೇಕಾಯಿತು. ಮಾರ್ಚ್ ಸೆಷನ್‌ನಲ್ಲಿ ಮತ್ತೆ ಬಜ್ಜೆಟ್ ತಯಾರು ಆಯಿತು. ಈಗ ಪುನಃ ಈ ಸೆಷನ್‌ನಲ್ಲಿ ಬಜ್ಜೆಟ್ ತಯಾರುಮಾಡಲಾಯಿತು. ಈ ಕೆಲಸವನ್ನು ಜವಾಬ್ದಾರಿವಹಿಸಿ ಕಷ್ಟಪಟ್ಟುಮಾಡಿದ್ದಾರೆ. Delay ಮತ್ತು corruption ಇವೆರಡನ್ನೂ ಹೊಡೆದೋಡಿಸಲು ನಾವೂ ಸಹ ಮಾನ್ಯ ಸದಸ್ಯರಷ್ಟೇ ಆತುರರಾಗಿದ್ದೇವೆ. ಇಷ್ಟು ಹೇಳಬಲ್ಲೆ. 1947ರ ಹಿಂದಿನ ಕಾಲದಲ್ಲಿ ಈ ರೀತಿಯಾಗಿ ಆಕ್ಷೇಪಣೆಮಾಡಲು ಜನರಿಗೆ ಧೈರ್ಯವಿರಲಿಲ್ಲ. ಈಗ ಜನತೆಯ ರಾಜ್ಯ ಇದೆ. ಏನೇ ಇರಲಿ delay ಆಗುವುದನ್ನು ತಪ್ಪಿಸೋಣ Corruption ಇಲ್ಲದಂತೆ ಆಗುವಹಾಗೆ ಪ್ರಯತ್ನ ಮಾಡೋಣ.

ಎಫಿಷಿಯೆನ್ಸಿ ಆಡಿಟ್ ಇಲಾಖೆಯವರು ಎಲ್ಲೂ ಚೆಕ್ ಮಾಡಿಲ್ಲ ಎಂದು ಹೇಳಿದರು. ಮಾಡಿದ್ದಾರೆ ಆದರೆ ಅವರ ಅಧಿಕಾರವೆಷ್ಟಿದೆಯೋ ಅಷ್ಟನ್ನು ಮಾತ್ರ ನಿರ್ವಹಿಸಿದ್ದಾರೆ. ಟೆಸ್ಟ್ ಚೆಕ್ ಮಾತ್ರ ಅವರು ಮಾಡುವುದು, ಬಾಕಿ ಆಡಿಟ್ ಇಲಾಖೆಯವರು ಸಹಕಾರ ಸಂಘಗಳ ಲೆಕ್ಕ ತನಿಖೆ ಮಾಡುವಹಾಗೆ, ಕಂಟ್ರೋಲರ್ ಆಫೀಸಿನವರು ಆಡಿಟ್ ಮಾಡುವಂತೆ ಮಾಡುವುದಿಲ್ಲ, ಟೆಸ್ಟ್ ಚೆಕ್ ಮಾಡಿ ಇರ್ರೆಗ್ಯುಲ್ಯಾರಿಟೀಜ್ ಇದ್ದರೆ ನೋಡಿ ಸಲಹೆ ಮಾಡುತ್ತಾರೆ. ಅದರ ಮೇಲೆ ಸೂಕ್ತ ಕ್ರಮ ಕೈಕೊಳ್ಳಲಾಗುತ್ತದೆ. ಆದ್ದರಿಂದ 1ನೆಯ ತಾರೀಖು ನವೆಂಬರ್ 1956ಕ್ಕೆ ಹಿಂದಿನ ವಿಷಯ ಬಿಡೋಣ. ಹೊಸರಾಜ್ಯ ಸ್ಥಾಪನೆಯಾಗಿ ಇಲ್ಲಿಗೆ ಹೊಸ ಸದಸ್ಯರು ಬಂದಿರುವಾಗ ಇರುವ ಅಡ್ಡಿ ಆತಂಕಗಳನ್ನು ಅವರು ಗಮನಕ್ಕೆ ತಂದರೆ ಅವನ್ನು ನಿವಾರಿಸಿ ಸತ್ಸಂಪ್ರದಾಯ ಸ್ಥಾಪನೆ ಮಾಡಿ ಒಳ್ಳೆಯ ರಾಜ್ಯ ಕಟ್ಟುವುದಕ್ಕೆ ಪ್ರಯತ್ನ ಮಾಡಲು ಅವಕಾಶವಾಗುತ್ತದೆ ಎಂದು ಮನವಿ ಮಾಡುತ್ತೇನೆ.

ಕೆಲವರು ರಸ್ತೆ ಸೇತುವೆ ಸೌಕರ್ಯದ ವಿಚಾರವಾಗಿ ಹೇಳಿದರು. ನಮ್ಮಲ್ಲಿ ನೂರು ಚದರಮೈಲಿಗೆ 36 ಮೈಲಿ ರಸ್ತೆಯಿದೆ. ಹೈದರಾಬಾದು ಪ್ರದೇಶದಲ್ಲಿ 6 ಮೈಲಿ ರಸ್ತೆಯಿದೆ. ಬೆಂಗಳೂರಿನಿಂದ ರಾಜ್ಯದ ಉತ್ತರ ದಿಕ್ಕಿನ ಜಿಲ್ಲೆಗಳಿಗೆ ಹೋಗಬೇಕಾದರೆ ಕೊಂಕಣ ಸುತ್ತಿ ಮೈಲಾರಕ್ಕೆ ಹೋದಂತಾಗುತ್ತದೆ. ಕಲಬುರ್ಗಿ, ಬಿಜಾಪುರ, ಬಿದರೆ ಜಿಲ್ಲೆಗಳಿಗೆ ಬೆಂಗಳೂರಿನಿಂದ ತುಂಬ ಬಳಸಾದ ಮಾರ್ಗದಲ್ಲಿ ಹೋಗಬೇಕಾಗಿದೆ. ಆದ್ದರಿಂದ ಈ ತೊಂದರೆ ತಪ್ಪಿಸಲು ಹೊಸರಸ್ತೆ ಮಾಡಬೇಕಾಗಿದೆ ಎಂಬ ಅಂಶವನ್ನು ಪ್ರಸ್ತಾಪ ಮಾಡಲಾಗಿದೆ. ಆದರೆ ಪ್ರಸ್ತಾಪ ಮಾಡದಿರುವ ಅಂಶ ಸರ್ಕಾರದ ಗಮನದಲ್ಲಿಲ್ಲವೆಂದು ತಿಳಿದುಕೊಳ್ಳಬಾರದು. ಶ್ರೀ ನರಸಿಂಹೇಗೌಡರು ನಮ್ಮ ಜೊತೆಯಲ್ಲೇ ಹಿಂದಿನ ಅಸೆಂಬ್ಲಿಯಲ್ಲಿದ್ದರು. ಅವರಿಗೂ ಅನುಭವವಿದೆ. ಹಿಂದೆ ಹೇಗಿತ್ತು, ಈಗ ಹೇಗಿದೆ ಎಂಬುದನ್ನು ವಿಚಾರ ಮಾಡಿ ನೋಡಿದರೆ ಅವರಿಗೇ ಎಲ್ಲವೂ ಗೊತ್ತಾಗುತ್ತದೆ. ಲೋಪದೋಷಗಳಿದ್ದರೆ ತಿದ್ದಿಕೊಳ್ಳಬಹುದು.

ಆ ಮೇಲೆ ಮಾನ್ಯ ಶಿವಪ್ಪನವರು ಇಂತಿಂತಹ ಆಹಾರ ಪದಾರ್ಥಗಳ ಡಿಪೋವಿನಲ್ಲಿ ಅಕ್ಕಿ ಇರಲಿಲ್ಲ, ಮಂತ್ರಿಗಳಿಗೆ ಹೇಳಿದೆ ಎಂದು ತಿಳಿಸಿದರು. ಆ ವಿಷಯ ವಿಸ್ತಾರವಾಗಿ ಪ್ರಸ್ತಾಪ ಮಾಡದಿದ್ದರೆ ಚೆನ್ನಾಗಿತ್ತು. ಹೇಳಿದ್ದರಿಂದ ಸಮಾಧಾನ ಹೇಳಬೇಕಾಗಿದೆ. ಕೇಂದ್ರ ಸರ್ಕಾರದವರು ಕೊಡಬೇಕಾದ ಅಕ್ಕಿಯನ್ನು ಒದಗಿಸಲು ಒತ್ತಾಯ ಮಾಡುತ್ತಿದ್ದೇವೆ. ದೇಶದಲ್ಲಿ ಪ್ರವಾಹದ ಹಾವಳಿಯ ದೆಸೆಯಿಂದ ದಾಸ್ತಾನಿಡುವುದಕ್ಕೆ ಕಷ್ಟವಾಯಿತು. ಅಷ್ಟು ಹೊರತು ಉದಾಸೀನರಾಗಿದ್ದಾರೆಂದು ಅವರು ತಿಳಿದುಕೊಳ್ಳಬಾರದು.

ಶ್ರೀ ವೀರಪ್ಪನವರು ರಿಸರ್ವ್‌ನಿಧಿ ಇಡಬೇಕೆಂದು ಹೇಳಿದರು. ಪ್ರಾಯಶಃ ಹಿಂದೆ ರಿಸರ್ವ್‌ಫಂಡ್ ಇಟ್ಟಿದ್ದುದನ್ನು ಗಮನದಲ್ಲಿಟ್ಟುಕೊಂಡು ಅವರು ಹಾಗೆ ಹೇಳಿರಬಹುದು. ಅಕ್ಕಿಯ ಮೇಲಾಸೆ ನೆಂಟರಮೇಲೆ ಪ್ರೀತಿ ಎನ್ನುವ ಹಾಗೆ ಹೇಳಿದರೆ ಹೇಗೆ? ಹಣ ಖರ್ಚು ಮಾಡದೆ ದೇಶದ ಬೆಳವಣಿಗೆ ಹೇಗೆ ತಾನೆ ಆಗಿ ಪ್ರಜೆಗಳಿಗೆ ಸೌಖ್ಯವಾದೀತು? ಹಿಂದೆ ಸರ್ ವಿರ್ಜಾ ಸಾಹೇಬರು ಯಾವ ನೀತಿಯನ್ನನುಸರಿಸುತ್ತಿದ್ದರೆಂಬುದು ಶ್ರೀ ನರಸಿಂಹೇಗೌಡರಿಗೆ ಗೊತ್ತು. ಕುಡಿಯುವ ನೀರಿನ ಬಾವಿಗಳಿಗಾಗಿ 50 ಸಾವಿರ ರೂಪಾಯಿಗಳನ್ನು ಒದಗಿಸಿದ್ದಾಗ ಅದು ಸಾಲದೆಂದು ಕೇಳಿಕೊಂಡರೆ ಒಂದು ಲಕ್ಷರೂಪಾಯಿಗಳಿಗೇರಿಸಿ ಸಂತೋಷಪಡಿಸುತ್ತಿದ್ದರು. ಅದೇ ಈಗ ಕುಡಿಯುವ ನೀರಿನ ಸೌಕರ್ಯಕ್ಕೆ 25 ಲಕ್ಷರೂಪಾಯಿಗಳನ್ನು ಕೊಡುತ್ತಿದ್ದೇನೆ. ಈಗ ವ್ಯತ್ಯಾಸವೇನಾಗಿದೆ ಎಂಬುದನ್ನು ಯೋಚ ಮಾಡಬೇಕು. ಇದರ ಜೊತೆಗೆ ಸಾಲ ತಂದು ಕಾರ್ಯ ನಿರ್ವಹಿಸುತ್ತಿದ್ದಾರೆಂದು ಟೀಕೆಮಾಡಿದರು. ದೇಶ ಕಟ್ಟಬೇಕಾದರೆ ಜನರ ಮೇಲೆ ಏನೂ ತೆರಿಗೆ ಹಾಕದೆ ಹೇಗೆ ಇರುವ ಹಣದೊಳಗೆ ಕಟ್ಟುವುದು? ಅದು ಸಾಧ್ಯವಿಲ್ಲ. ಹೊಸ ರಾಜ್ಯ ಕಟ್ಟಬೇಕೆಂದು ಎಲ್ಲರಿಗೂ ಉತ್ಸಾಹವಿದೆ. ಆ ದೃಷ್ಟಿಯಿಂದ ಸಾಲವಾದರೂ ಮಾಡಿ ಆ ಕೆಲಸ ನೆರವೇರಿಸಬೇಕು. ಇನ್ನು ಮುಂದೆ, we must tighten up our belt. ರಷ್ಯಾದೇಶದವರು ಉತ್ತಮಸ್ಥಿತಿಗೆ ಬರುವುದಕ್ಕೆ ಎಷ್ಟು ಕಷ್ಟಪಟ್ಟಿದ್ದಾರೆಂಬುದು ಎಲ್ಲರಿಗೂ ಗೊತ್ತಿದೆ. ಬ್ರೆಡ್ ಮತ್ತು ಕ್ಯಾಬೇಜ್ ಫುಡ್ ತಿನ್ನಬೇಕು. We must pay extra income-tax. ನಮ್ಮಲ್ಲಿ ಬರಿಯ ಕಂಟ್ರೋಲ್ ಜಾರಿಗೆ ತರುವುದೇ ಎಷ್ಟೋ ಕಷ್ಟವಾಗಿತ್ತು. ಜನರು ಆಗ ಆದ ಕಷ್ಟವನ್ನೇ ಸಹಿಸಲಾರದೆ ಹೋದರು. ಎಲ್ಲರಿಗೂ ಸೌಖ್ಯ ದೊರೆಯಬೇಕು, ದೇಶ ಶೃಂಗಾರವಾಗಬೇಕು. ಸಾಲ ಮಾಡದೆ, ತೆರಿಗೆ ಹಾಕದೆ ಆ ಕೆಲಸ ಮಾಡಬೇಕು ಎಂದು ಹೇಳಿದರೆ ಬಹಳ ಕಷ್ಟ. ಆದ್ದರಿಂದ ನಮ್ಮ ಸ್ಥಿತಿಗತಿಗಳಿಗೆ ಹೊಂದಿಕೊಂಡು ಸರ್ಕಾರ ಕಾರ್ಯಕ್ರಮ ಕೈಗೊಂಡು ಜನರಿಗೆ ತೊಂದರೆಯಾಗದಂತೆ ಅವರ ಒಪ್ಪಿಗೆಯನ್ನು ಪಡೆದು ಹಣ ವಸೂಲುಮಾಡಿ ರಾಜ್ಯ ಕಟ್ಟಬೇಕೆಂದಿದ್ದೇವೆ. ವಿಶೇಷ ಹಣ ಅದಕ್ಕೆ ಬೇಕಾಗಿದೆ. ಇದು ರಿಸರ್ವ್ ಕಟ್ಟುವ ಕಾಲವಲ್ಲ. ಇದು ಎಲ್ಲರೂ ಸೇರಿ ದೇಶಾಭಿವೃದ್ಧಿ ಮಾಡುವ ಕಾಲ. ಆದ್ದರಿಂದ ಈಗ ರಿಸರ್ವ್ ಇಡುವಂಥ ಉದ್ದೇಶವಾದರೂ ಏನಿದೆ? ನಾವು ಹಣ ತೆಗೆದುಕೊಂಡುಹೋಗಿ ಭೂಮಿಯಲ್ಲಿ ಹೂತರೆ ಏನು ಪ್ರಯೋಜನ? ಈ ದೇಶಾಭಿವೃದ್ಧಿಯನ್ನು ಚೆನ್ನಾಗಿ ಮಾಡಿದರೆ ನಮಗಲ್ಲದಿದ್ದರೆ ನಮ್ಮ ಮಕ್ಕಳು ಮೊಮ್ಮಕ್ಕಳಿಗಾದರೂ ಅನುಕೂಲವಾಗುತ್ತದೆ.

ಕಳೆದ ಚುನಾವಣೆಯಲ್ಲಿ ಎರಡು ಮೂರು ಕಡೆ ಸರ್ಕಾರದ ಕೈವಾಡವಿತ್ತೆಂದು ಹೇಳಿದರು. ಸರ್ಕಾರದ ಕೈವಾಡವೇನೂ ಇರಲಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. Fair and free elections ಆಗಬೇಕೆಂದು ಬಹಳ ಪ್ರಯತ್ನ ಮಾಡಿದ್ದೇವೆ. ಈ ದಿವಸ ತಾವೆಲ್ಲಾ ಇಲ್ಲಿರುವುದೇ election fair and free ಆಗಿತ್ತೆಂಬುದಕ್ಕೆ ನಿದರ್ಶನವಾಗಿದೆ. ಆ ಮೇಲೆ ಪೋಲಿಸ್ ಸಿಬ್ಬಂದಿಯನ್ನು ಉಪಯೋಗಿಸಿದರೆಂದು ಹೇಳಿದರು. ಅದನ್ನು ಉಪಯೋಗಿಸಬೇಕಾದ ಪ್ರಸಂಗವೇ ಇರಲಿಲ್ಲ, ಯಾವಾಗಲೂ ಹಾಗೆ ಉಪಯೋಗಿಸುವುದಿಲ್ಲ, ಅದರಿಂದ ಪ್ರಯೋಜನವೂ ಇಲ್ಲ ಎಂದು ತಿಳಿಸುತ್ತೇನೆ.

ಇನ್ನೊಂದು ಅಂಶ ಪ್ರಸ್ತಾಪ ಮಾಡಿದ್ದಾರೆ. ಕುದುರೆ ಜೂಜನ್ನು ಸರ್ಕಾರ ನಡೆಸಬೇಕು; ಇಲ್ಲದಿದ್ದರೆ ಅದನ್ನು ವಜಾ ಮಾಡಬೇಕು ಎಂದು ಹೇಳಿರುವುದು ಒಂದಕ್ಕೊಂದು ವಿರುದ್ಧವಾಗಿದೆ. ಅದನ್ನು ನಡೆಸಬಾರದೆಂದು ಹೇಳಿದ್ದರೆ ಒಪ್ಪಬಹುದಾಗಿತ್ತು. ಪಾನನಿರೋಧ ಜಾರಿಗೆ ತಂದಿರುವ ಹಾಗೆ ಕುದುರೆ ಜೂಜಿನ ವಿಷಯದಲ್ಲೂ ಒಂದು ಸರಿಯಾದ ನೀತಿಯನ್ನನುಸರಿಸಬೇಕೆಂದು ಹೇಳಿದ್ದರೆ ನೀತಿಯ ದೃಷ್ಟಿಯಿಂದ ಪರಿಶೀಲಿಸಬೇಕಾಗುತ್ತಿತ್ತು. ಹಾಗಿಲ್ಲದೆ ನಡೆಸಿದರೆ ಸರ್ಕಾರ ನಡೆಸಲಿ, ಇಲ್ಲದಿದ್ದರೆ ವಜಾಮಾಡಲಿ ಎಂದು ಹೇಳುವುದು ಒಪ್ಪುವಂತಿಲ್ಲ. ಈಗ ಕುದುರೆ ಜೂಜನ್ನು ನಡೆಸುವಕಡೆ ನಾಮಕರಣ ಸದಸ್ಯರೂ ಇದ್ದಾರೆ, ಖಾಸಗಿ ಸದಸ್ಯರೂ ಇದ್ದಾರೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಕುದುರೆಯ ಮೇಲೆ ಕುಳಿತುಕೊಳ್ಳದೇ ಇರುವ ಸದಸ್ಯರೂ ಇದ್ದಾರೆ, ನಿಜ.

ಶ್ರೀ ಟಿ. ಮರಿಯಪ್ಪ.—ವಿಶೇಷ ಪಾವೀಣ್ಯ ಪಡೆದ ವರೂ ಇದ್ದಾರೆ. ಆದ್ದರಿಂದ ಈ ಜೂಜಿನ ಸಂಬಂಧದಲ್ಲಿ ನ್ಯೂನತೆಗೆ ಅವಕಾಶವಿಲ್ಲ. ಸೂಕ್ತ ಕಾರ್ಯಕ್ರಮವೂ ಇದೆ. ಯಾರಿಗೂ ಶಂಕೆ ಬೇಕಾಗಿಲ್ಲ.

ಇನ್ನೊಂದು ವಿಷಯ ಪ್ರಸ್ತಾಪ ಮಾಡಿದ್ದಾರೆ. ಸಿರಾತಾಲ್ಲೂಕಿನ ವಿಚಾರವನ್ನೇನು ಸೂಚಿಸಿದರೋ ಅದನ್ನು ವಿಚಾರಮಾಡಿದರೆ ಬಹಳ ಮಟ್ಟಿಗೆ ಅಪಾದನೆ ಮಾಡಿದವರೇ ಅದಕ್ಕೆ ಕಾರಣಭೂತರೆಂದು ತಿಳಿದು ಬಂದಿದೆ. ಅವರ ಕೈವಾಡವಿತ್ತು, ಅವರು ಲೋಕಲ್ ಪಾಲಿಟಿಕ್ಸ್‌ನಲ್ಲಿ ಇಂಟರ್‌ಫೀಯರ್ ಮಾಡಿದರು ಎಂದು ಗೊತ್ತಾಗಿದೆ.

ಸಣ್ಣಪುಟ್ಟ ಅಧಿಕಾರಿಗಳನ್ನು ವರ್ಗ ಮಾಡುವಾಗ ಸರ್ಕಾರದವರು ಕೈ ಹಾಕಬಾರದೆಂದು ಹೇಳಿದರು. ಖಂಡಿತ ಆ ವಿಚಾರದಲ್ಲಿ ಸರ್ಕಾರ ಕೈಹಾಕುವುದಿಲ್ಲ, ಸರ್ಕಾರ ಕೈಹಾಕದೆ ನಿಷ್ಠೂರ ಕೂಡ ಬಂದಿದೆ. ಅನೇಕ ಕಡೆಯಿಂದ ಒತ್ತಾಯ ಬಂದರೂ ಕೈಹಾಕಬಾರದು ಎಂದು ಆ ಗೋಜಿಗೆ ಹೋಗಿರುವುದಿಲ್ಲ, ಹೋಗುವುದೂ ಇಲ್ಲ ಎಂದು ಭರವಸೆ ಕೊಡುತ್ತೇನೆ.

ಆಮೇಲೆ ವಿದ್ಯಾಭ್ಯಾಸದ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಆ ವಿಚಾರದಲ್ಲಿ ಏನು ಮಾಡಬೇಕೆಂಬುದನ್ನು ಬಡ್ಜೆಟ್ ಭಾಷಣದಲ್ಲಿ ಸ್ಪಷ್ಟಪಡಿಸುತ್ತೇನೆ. ಐದು ಭಾಗಗಳಲ್ಲಿ 5 ರೀತಿಯ ವಿದ್ಯಾಭ್ಯಾಸ ಪದ್ಧತಿಯಿದೆ, ನಿಬಂಧನೆಯಿದೆ. ಆದ್ದರಿಂದ ಅದನ್ನು ಸ್ಥೂಲವಾಗಿ ವಿಮರ್ಶೆ ಮಾಡಲು ಇಂಟಿಗ್ರೇಷನ್ ಸಮಿತಿಯಿದೆ. ಆ ಸಮಿತಿಯವರು ಪರಿಶೀಲನೆ ಮಾಡಿ ಎಲ್ಲಾ ಕಡೆಯೂ ಒಂದೇ ವಿಧವಾಗಿರುವ ಹಾಗೆ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಬಲಾತ್ಕಾರ ವಿದ್ಯಾಭ್ಯಾಸವನ್ನು ಜಾರಿಗೆ ತರಬೇಕೆಂದು ಸೂಚನೆ ಮಾಡಿದರು. ಅದನ್ನು ಗಮನಿಸುತ್ತೇವೆ.

ಆಮೇಲೆ ನಿಮ್ನ ವರ್ಗದ ವಿಚಾರ ಪ್ರಸ್ತಾಪ ಮಾಡಿ ಈಗ ಹಂಚುತ್ತಿರುವ ವ್ಯವಸ್ಥೆಗೆ ಬದಲಾಗಿ ಒಂದೊಂದು ಹಳ್ಳಿಗೆ ಒಂದೊಂದು ಸಲ ಹಂಚಿ ಮುಂದುವರಿಯಬೇಕೆಂದು ಸಲಹೆ ಮಾಡಿದರು. ಆ ರೀತಿ ಮಾಡಿದರೆ ಬಹಳ ಕಷ್ಟವಾಗಬಹುದು, ಬಾಕಿಯವರಿಗೆ ಅಸಮಾಧಾನ ವಾಗಬಹುದು. ಈಗ ಡಿಸ್ಟ್ರಿಕ್ಟುವಾರು ಜನಸಂಖ್ಯೆಯ ದಾಮಾಷಾ ಪ್ರಕಾರ ಹಂಚಿಕೆ ಮಾಡಬೇಕೆಂದಿದೆ. ಈಗೇನು ಸಲಹೆ ಮಾಡಿದ್ದಾರೋ ಅದನ್ನು ಪರಿಶೀಲಿಸುತ್ತೇವೆ.

ಸ್ಥಳೀಯ ಸಂಸ್ಥೆಗಳಿಗೆ ಸಾಲ ಮತ್ತು ಗ್ರಾಂಟು ಕೊಡುವ ವಿಚಾರ, ಮಹಿಳಾ ಸದಸ್ಯರ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಹೈದರಾಬಾದು ಪ್ರದೇಶದಲ್ಲಿ ಅನೇಕ ಕಡೆ ರಸ್ತೆಯಿಲ್ಲದಿರುವ ಪ್ರದೇಶವಿದೆ, ಅಲ್ಲಿ ಒಳ್ಳೆಯಭೂಮಿಯಿದೆ. ದೇವರು ಕೃಪೆ ಮಾಡಿದರೆ ಅಲ್ಲಿ ಒಳ್ಳೆಯ ಬೆಳೆಯಾಗುತ್ತದೆ. ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಸಕಾಲದಲ್ಲಿ ಸಾಕಷ್ಟು ಮಳೆಯಾದರೆ ದೇಶಕ್ಕೆ ಎರಡು ವರ್ಷಗಳಿಗಾಗುವಷ್ಟು ಆಹಾರ ಪದಾರ್ಥ ಸಿಕ್ಕುತ್ತದೆ. ಆದರೆ ಮಳೆ ಅಲ್ಲಿ ಸಕಾಲದಲ್ಲಿ ಬಾರದೆ ಅತಿವೃಷ್ಟಿ ಅನಾವೃಷ್ಟಿಯಾಗುತ್ತಿದೆ. ಇದನ್ನೆಲ್ಲಾ ಗಮನಿಸಿ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆಂದು ಭರವಸೆಕೊಡುತ್ತೇನೆ.

12 NOON

ಇನ್ನೊಂದು ವಿಷಯವನ್ನು ಮಾನ್ಯ ಕೆಂಚಪ್ಪ ಅವರು ಪ್ರಸ್ತಾಪಮಾಡಿದರು. Public Security Actನ್ನು ಇನ್ನೂ ಇಟ್ಟುಕೊಂಡಿದ್ದೇವೆಂದು ಅವರು ಹೇಳಿದರು. ಅದರಲ್ಲಿ ತಪ್ಪೇನಿಲ್ಲ. ತಮ್ಮಗಳ ಅನುಮತಿಯಿಂದ ಕೆಲಸ ಮಾಡುವ ಕಾಲದಲ್ಲಿ ಯಾವ ಕಾನೂನಿದ್ದರೆ ತಾನೆ ಏನು ? ಉದಾಹರಣೆಗಾಗಿ ಅದರ ಪ್ರಕಾರ ಎಷ್ಟು ಜನರು ಬಂಧನದಲ್ಲಿದ್ದಾರೆಂಬುದನ್ನು ಅವರೇ ಹೇಳಲಿ. ಒಬ್ಬರೂ ಇಲ್ಲ! ಆದ್ದರಿಂದ ಯಾವುದಿದ್ದರೂ ಅದನ್ನು judicious ಆಗಿಯೇ ಉಪಯೋಗಿಸುತ್ತೇವೆಂದು ಅವರು ತಿಳಿದುಕೊಳ್ಳಬೇಕು. ಯಾವ ವ್ಯಕ್ತಿಯ ಸ್ವಾತಂತ್ರ್ಯಕ್ಕೂ ಅಪೋಹ ಬಾರದಂತೆ ನೋಡಿಕೊಳ್ಳುತ್ತೇವೆಂಬುದನ್ನು ತಾವುಗಳು ನಂಬಬೇಕು.

